ಏಪ್ರಿಲ್-2014

ಕಲ್ಯಾಣ ಕಿರಣ

ಬೆಲೆ: ರೂ. 20





ಕಲ್ಯಾಣ ಕಿರಣ

ಜೋ ಅಕ್ಕಮಹಾದೇವಿ

ಜೋ ಅಕ್ಕಮಹಾದೇವಿ ವೈರಾಗ್ಯ ಮೇರು
ಜೋ ಜೋ ಶರಣ ಜನರ ಕಣ್ಮಣಿಯ ತೇಜ ॥ಪ॥
ಭುವಿಗಂದು ನೀ ಬಂದೆ ಓಂಕಾರ ತಂದೆಯಿಂ
ಚೆಲ್ವಿನಂಗವ ಧರಿಸಿ ಲಿಂಗಮ್ಮ ತಾಯಿಯಿಂ
ಬೆಳೆಯುತ್ತ ಬಿದಿಗೆಯ ಚಂದ್ರಮನ ತೆರದಿ
ಇಳೆಯೊಳು ಮೆರೆದೆಯೌ ಪಾರ್ವತಿಯ ತೇಜದಿ ।ಜೋ। ॥1॥
ಉದಮದದ ಯೌವನದ ಸೊಬಗು ವಿಕಸಿತವಾಗೆ
ಹೃದಯವು ತಾನಾಗಿ ಲಿಂಗದೇವನಿಗೊಲಿಯೆ
ಮುದಗೊಂಡು ಒಲಿದ ಕೌಶಿಕನ ತೊರೆದು
ಒದವಿ ಧರಿಸಿ ನಡೆದೆ ದಿವ್ಯ ದಿಗಂಬರವ ।ಜೋ। ॥2॥
ಏರುಂಜವ್ವನದ ಮೇರುವೆ ತರುಣಿಯೆ
ಬರುವ ಬಯಕೆ ಇರಲು ಪತಿ ಹೆಸರ ಉಸಿರು
ಎಂಬ ಪ್ರಭುವಿನ ಕಟು ಮಾತಿಗೆ ಬೆದರದೆ
ಅಂಬೆ ಉತ್ತರಿಸಿದೆ ದೇವಗೊಲಿದವಳೆಂದು ।ಜೋ। ॥3॥
ಅನುಭವ ಮಂಟಪದ ಶರಣರ ಅಕ್ಕನಾಗಿ
ಮೌನದಿ ಕದಳಿಯ ಸಿರಿಬನವ ಪೊಕ್ಕು
ಧನ್ಯ ಮಾಡಿದೆ ನೀನು ಬಸವ ಧರ್ಮದ ವಾಣಿ
ಮಾನ್ಯತೆಯ ಪಡೆದೆಯೌ ಸಚ್ಚಿದಾನಂದನಲಿ ।ಜೋ। ॥4॥
(ಏಪ್ರಿಲ್ 15ರಂದು ಅಕ್ಕಮಹಾದೇವಿ ಜಯಂತಿ) – ಮಾತಾಜಿ

ವಚನ ಕಿರಣ

ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ,
ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು–
ಅಕ್ಕಿ–ಕಣಕವ ತಕ್ಕೊಂಡು ಹೋಗುವ ಗುರುವನು ಕಂಡರೆ
ಕೆಡಹಿ ಹಾಕಿ ಮೂಗನೆ ಕೊಯ್ದು ಇಟ್ಟಂಗಿಯ ಕಲ್ಲಿಲೆತಿಕ್ಕಿ
ಸಾಸಿವೆ ಹಿಟ್ಟನ್ನು ತಳಿದು ಮೇಲೆ ಲಿಂಬೆಯ ಹುಳಿ ಹಿಂಡಿ
ಪಡುವಣಗಾಳಿಗೆ ಹಿಡಿ ಎಂದಾತ
ನಮ್ಮ ಅಂಬಿಗರ ಚೌಡಯ್ಯ.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-45	ಬಸವ ಶಕೆ -880	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-04	ಏಪ್ರಿಲ್ -2014	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಮೇ - ಜೂನ್ ತಿಂಗಳಲ್ಲಿ ಬರುವ ಹಬ್ಬ-ಹುಣ್ಣಿಮೆಗಳು-ಉತ್ಸವಗಳು

- ಮಡಿವಾಳ ಮಾಚಿದೇವರ ಜಯಂತಿ — ಮೇ -1
- ಬಸವ ಜಯಂತಿ – ಮೇ- 02
- ಧಾರವಾಡ ಶರಣೋತ್ಸವ — ಮೇ -23, 24, 25
- ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಬಸವೋತ್ಸವ — ಜೂನ್- 22
- ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಲಿಂಗೈಕ್ಯ ಸಂಸ್ಮರಣೆ — ಜೂನ್- 30

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್

ಬೆಂಗಳೂರು-560010

ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123

Email :- kalyanakirana1970@gmail.com

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ವಿಶ್ವಗುರು ಬಸವಣ್ಣನವರ 881ನೆಯ ಜಯಂತಿ ಉತ್ಸವ

ಮಾತೃ(ಶುಕ್ರ)ವಾರ, ದಿ.02-05-2014 ರಂದು

ವೇಳೆ : ಬೆಳಿಗ್ಗೆ 10-30

ಸ್ಥಳ : ಬಸವ ಮಂಟಪ, ರಾಜಾಜಿನಗರ

ದಿವ್ಯ ಸನ್ನಿಧಿ : ಪೂಜ್ಯ ಶ್ರೀ ಡಾ|| ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠ, ಕೂಡಲ ಸಂಗಮ



ವಿಶ್ವ ಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ

2035, 20ನೆಯ ಮುಖ್ಯ ರಸ್ತೆ, ಎರಡನೆಯ ವಿಭಾಗ

ರಾಜಾಜಿ ನಗರ, ಬೆಂಗಳೂರು-560010

ದೂರವಾಣಿ : 080-2292373(23131476

ಜಯ ಬಸವರಾಜ ಭಕ್ತ ಜನ ಸುರಭೂಜ
ಜಯತು ಮಹಕಾರಣಿಕ ಲಿಂಗದೇವನ ಘನತೇಜ
ಜಯತು ಕರುಣಾ ಸಿಂಧು ಭಜಕಜನ ಬಂಧು
ಜಯ ಇಷ್ಟ ದಾಯಕ ರಕ್ಷಿಸು ಶ್ರೀ ಗುರು ಬಸವ

ವಿಶ್ವ ಗುರು ಬಸವಣ್ಣನವರ
881 ನೆಯ ಜಯಂತಿ ಉತ್ಸವ

1. ಬಸವೇಶ್ವರ ಪೂಜಾ ವ್ರತ ಮತ್ತು ಪುಷ್ಪಾರ್ಚನೆ - ಬೆಳಿಗ್ಗೆ 8-00ರಿಂದ
2. ತೊಟ್ಟಿಲು ಮತ್ತು ಆರತಿ 3. ಉಪನ್ಯಾಸ - 10-30 4. ಪ್ರಸಾದ ವಿತರಣೆ, 5. ಮೆರವಣಿಗೆ

ವಿಶೇಷ ಸೂಚನೆ

★ **ಪುಷ್ಪಾರ್ಚನೆ**ಗೆ ಅನೇಕ ಜನ ಶರಣ ಬಂಧುಗಳಿಗೆ ಅವಕಾಶವಿದೆ. ಏನಾದರೂ ಅಪೇಕ್ಷೆಗಳಿದ್ದರೆ ಅವುಗಳ ಪೂರೈಕೆಗಾಗಿ ಸಂಕಲ್ಪ ಮಾಡಿ ಪುಷ್ಪಾರ್ಚನೆ ಮಾಡಬಹುದು.

★ ಅನೇಕ ಗಣ್ಯರು, ಉಪನ್ಯಾಸಕರು, ಕಾರ್ಯಕ್ರಮದಲ್ಲಿ ಭಾಗಿಗಳಾಗಿ ಉಪನ್ಯಾಸ ನೀಡಲಿದ್ದಾರೆ.

★ ಕಾರ್ಯಕ್ರಮದ ನಂತರ ಪ್ರಸಾದ ದಾಸೋಹವಿರುತ್ತದೆ.

★ **ಮಹಾಪ್ರಸಾದ(ಊಟ)**ದಾಸೋಹಕ್ಕೆ ದೇಣಿಗೆ, ಪ್ರಸಾದ ಸಾಮಗ್ರಿ ನೀಡಲು ಅವಕಾಶ ಉಂಟು. ಬಸವ ಮಂಟಪದ ಕಾರ್ಯಕ್ರಮದಲ್ಲಿ ಭಾಗಿಗಳಾದವರಿಗೆ ಮಾತ್ರವಲ್ಲದೆ ಸಾರ್ವಜನಿಕವಾಗಿಯೂ ಪ್ರಸಾದ ವಿತರಣೆ ಏರ್ಪಡಿಸಲಾಗಿದೆ.

ಮೆರವಣಿಗೆ

ಪ್ರಸಾದ ವಿತರಣೆಯ ಬಳಿಕ ಮಧ್ಯಾಹ್ನ 4-00ರಿಂದ ಮೆರವಣಿಗೆಯು ಬಸವ ಮಂಟಪದಿಂದ ಹೊರಟು ನವರಂಗ್ ಟಾಕೀಸ್, ಭಾಷ್ಯಂ ಸರ್ಕಲ್, ಇ.ಎಸ್.ಐ ಮಾರ್ಗವಾಗಿ ಸಾಗಿ ಪುನಃ ಬಸವ ಮಂಟಪದಲ್ಲೇ ಪೂರ್ಣಗೊಳ್ಳುವುದು. ಶ್ರೀ ಗುರು ಬಸವಣ್ಣನವರ ಭಾವಚಿತ್ರದೊಡನೆ ನಡೆಯುವ ಪಥ ಸಂಚಲನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಶರಣೆಯರು ಭಾಗವಹಿಸಿ, ಪಥ ಸಂಚಲನ ಮಾಡಲು ಕೋರುತ್ತೇವೆ. ಬಿಳಿಯ ವಸ್ತ್ರಗಳನ್ನು ಧರಿಸಿ, ಕಾವಿಯ ಸ್ಕಾರ್ಫ್ ಹೊದ್ದು ಶೋಭೆ ತರಬೇಕೆಂದು ವಿನಂತಿಸುತ್ತೇವೆ.

★ **ವಿಶೇಷ ಕೋರಿಕೆ:** ಬಸವ ಜಯಂತಿಯು ಅತ್ಯಂತ ಪವಿತ್ರವಾದ ಹಬ್ಬ. ಶರಣ ಬಂಧುಗಳು ಮದುವೆ, ಗೃಹ ಪ್ರವೇಶ, ಅಂಗಡಿ ಪ್ರಾರಂಭೋತ್ಸವ ಮುಂತಾದವುಗಳನ್ನು ಇಟ್ಟುಕೊಂಡು ಕಾರ್ಯಕ್ರಮದಲ್ಲಿ ಭಾಗಿಯಾಗುವುದನ್ನು ಬಿಡಬಾರದು. ಅಂದು ಅತ್ಯಂತ ಶುಭದಿನವಾದ್ದರಿಂದ ಗೃಹ ಪ್ರವೇಶ, ಅಂಗಡಿ ಪ್ರಾರಂಭೋತ್ಸವ ಮುಂತಾಗಿ ಸಂಕ್ಷಿಪ್ತವಾಗಿ ಬೆಳಗಿನ ಹೊತ್ತು ಬಸವೇಶ್ವರ ಪೂಜಾವ್ರತದೊಡನೆ ಪೂರೈಸಿ, ಮತ್ತೊಂದು ದಿವಸ ಸ್ನೇಹಿತರು, ಬಂಧು ಮಿತ್ರರನ್ನು ಆಹ್ವಾನಿಸಿ ಸಾರ್ವಜನಿಕವಾಗಿ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮ ಮತ್ತು ಮೆರವಣಿಗೆಯಲ್ಲಿ ಭಾಗವಹಿಸಿ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ದಿವ್ಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಬಸವ ಜಯಂತಿಯ ಈ ಪವಿತ್ರ ಕಾರ್ಯಕ್ರಮದಲ್ಲಿ ಜಾತಿ ಮತ ಪಂಥ ಭೇದವಿಲ್ಲದೆ ಎಲ್ಲರೂ ಭಾಗಿಗಳಾಗಬೇಕೆಂದು, ತನು, ಮನ, ಧನಗಳಿಂದ ಸಹಕರಿಸಬೇಕೆಂದು ಆಶಿಸುತ್ತೇವೆ.

ಶರಣ. ಎನ್.ಪುಟ್ಟರುದ್ರ
ಗೌ. ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ
ಬೆಂಗಳೂರು

ಪೂಜ್ಯಶ್ರೀ ಡಾ|| ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ
ಕೂಡಲ ಸಂಗಮ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಧಾರವಾಡ ನಗರದ ಉಳವಿ ರಸ್ತೆಯಲ್ಲಿರುವ
ಜಗನ್ಮಾತಾ ಅಕ್ಕಮಹಾದೇವಿ ಮಠದ
46ನೆಯ ವಾರ್ಷಿಕೋತ್ಸವ ಮತ್ತು
ಐದನೆಯ

ಶರಣೋತ್ಸವ

2014ರ ಮೇ 23, 24 ಮತ್ತು 25ರಂದು






ಸ್ಥಳ :
ದಿ.23 ಮತ್ತು 24ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಭವನದಲ್ಲಿ
ದಿ.25ರಂದು ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ

ಸರ್ವರಿಗೂ ಆದರದ ಸ್ವಾಗತ

ಶರಣು, ಬನ್ನಿ

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666



ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ
ಉಳವಿ ರಸ್ತೆ, ಧಾರವಾಡ ಸಂಸ್ಥೆಯ



46ನೆಯ ವಾರ್ಷಿಕೋತ್ಸವ ಮತ್ತು
ಐದನೆಯ

ಶರಣೋತ್ಸವ ಕಾರ್ಯಕ್ರಮ

2014, ಮೇ 23, 24 ಮತ್ತು 25 ರಂದು

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ ಒಂದು ವಿಶ್ವಸ್ಥ ಸಂಸ್ಥೆ ಇದ್ದು 1968ರಲ್ಲಿಯೇ ಸ್ಥಾಪನೆಗೊಂಡಿದೆ. ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 1967ರಲ್ಲಿಯೇ ಜಮೀನನ್ನು ಖರೀದಿಸಿ ಅಕ್ಕಮಹಾದೇವಿ ಆಶ್ರಮ ನಿರ್ಮಾಣ ಆರಂಭಿಸಿದರು. ವಿಶ್ವಗುರು ಬಸವಣ್ಣನವರು ಪುರುಷರಷ್ಟೇ ಸ್ತ್ರೀಯರಿಗೂ ಧಾರ್ಮಿಕ, ಸಾಮಾಜಿಕ ಹಕ್ಕುಗಳು ಲಭ್ಯವಾಗಬೇಕೆಂಬ ಕಳಕಳಿಯಿಂದ ಮಹಿಳೆಯರಿಗೂ ಧಾರ್ಮಿಕ ಸಂಸ್ಕಾರ ಕೊಟ್ಟುದಲ್ಲದೆ, ಸಾಮಾಜಿಕ ಸಮಾನತೆಯನ್ನು ಒದಗಿಸಿದರು. ಮಹಿಳಾ ಕುಲದ ಪ್ರತಿನಿಧಿಯಾಗಿ ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿ ಅನುಭವ ಮಂಟಪದಲ್ಲಿ ಆಚಾರ್ಯ ಪದವಿಯಿಂದ ಗೌರವಿಸಲ್ಪಟ್ಟರು.

ವೀರ ವಿರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಅನುಭಾವ ಪೀಠವೊಂದನ್ನು ಸ್ಥಾಪಿಸಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅದಕ್ಕೆ ಪೂಜ್ಯ ಶ್ರೀ ಮಾತೆ ಮಹಾದೇವಿಯವರನ್ನು ಪ್ರಥಮ ಪೀಠಾಧೀಶರನ್ನಾಗಿ ದಿ.21-4-1970ರಂದು ಪೀಠಾರೋಹಣ ಮಾಡಿಸಿದರು. ಈ ಐತಿಹಾಸಿಕ ಪೀಠಾರೋಹಣವು ನಡೆದುದು ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು.

ಟ್ರಸ್ಟ್ ವತಿಯಿಂದ ಪ್ರಾರ್ಥನಾ ಮಂದಿರ-ಬಸವ ಮಂಟಪವನ್ನು ಮತ್ತು ದಾಸೋಹ ಶಾಲೆಯನ್ನು ಕಟ್ಟಿಸಲಾಗಿದೆ. ಪ್ರತಿ ದೇವ(ಭಾನು)ವಾರ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆಯು ಬೆಳಿಗ್ಗೆ 11ರಿಂದ 1-30ರವರೆಗೆ ನಡೆಯುತ್ತದೆ. ಪ್ರಾರ್ಥನೆ-ಪ್ರವಚನದ ನಂತರ ಪ್ರಸಾದ ದಾಸೋಹ ಇರುತ್ತದೆ. ಶರಣರ ಜಯಂತಿ, ಲಿಂಗೈಕ್ಯ ಸಂಸ್ಮರಣೆಯನ್ನು ವಿಶೇಷ ದಿನಗಳಂದು ಆಚರಿಸಲಾಗುವುದು. ಶಿವರಾತ್ರಿಯಂದು ಗಣಮೇಳವನ್ನು ಪಥ ಸಂಚಲವನ್ನು ಬಸವ ಜಯಂತಿಯಂದು ಗುರು ಬಸವಣ್ಣನವರ ಭಾವಚಿತ್ರದ ಮೆರವಣಿಗೆಯನ್ನು ಶರಣ-ಶರಣೆಯರ ಪಥ ಸಂಚಲನವನ್ನು ಏರ್ಪಡಿಸಲಾಗುವುದು. ಎಡದ ಕೈಯಲ್ಲಿ ಲಿಂಗಪೂಜೆ ಬಲದ ಕೈಯಲ್ಲಿ ಜಂಗಮಸೇವೆ ಎಂಬ ಧರ್ಮಪಿತ ಬಸವಣ್ಣನವರ ವಾಣಿಯನ್ನು ಅನುಸರಿಸಲೋಸುಗ ಅನಾಥಾಲಯವನ್ನು ನಡೆಸಲಾಗುತ್ತಿದೆ.

40 ವರ್ಷ ಕಾಲ ಅಖಂಡವಾಗಿ ಸಂಚರಿಸಿ ಧರ್ಮ ಪ್ರಚಾರ ಮಾಡಿದ ಮಹಾಜಗದ್ಗುರು ಪೂಜ್ಯ ಲಿಂಗಾನಂದ ಸ್ವಾಮಿಗಳು ದಿ. 30 -6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಕೂಡಲ ಸಂಗಮದಲ್ಲಿ ದಿ. 13-1-1992ರಂದು ಬಸವ ಧರ್ಮದ ಪರಮೋಚ್ಚ

ಪೀಠವನ್ನು ಏರಿದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಪೂಜ್ಯ ಗುರುಗಳ ಸದಿಚ್ಛೆಯಂತೆ ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿ. 13-1-1996ರಂದು ಆರೋಹಣ ಮಾಡಿದರು. ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಕ್ಕೆ ದ್ವಿತೀಯ ಪೀಠಾಧೀಶರನ್ನಾಗಿ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು 1996ರ ಅಕ್ಕನ ಹುಣ್ಣಿಮೆ ಯಂದು ಪೀಠಾರೋಹಣ ಮಾಡಿಸಿದರು. ಉಭಯ ಜಗದ್ಗುರುಗಳೂ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳಾದ ದೆಹಲಿ, ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಲ್ಲಿ ಸಂಚರಿಸಿ ಪ್ರವಚನ, ಸಮ್ಮೇಳನಗಳನ್ನು ಮಾಡಿರುವುದೇ ಅಲ್ಲದೆ ಸಂಸ್ಥೆಯ ಶಾಖೆಗಳನ್ನು, ಬಸವ ಮಂಟಪಗಳನ್ನು ತೆರೆದಿದ್ದಾರೆ. ಕೂಡಲ ಸಂಗಮದಲ್ಲಿ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ಶರಣ ಮೇಳ, ಬಸವ ಕಲ್ಯಾಣದಲ್ಲಿ ಆಶ್ವಯುಜ ಶುದ್ಧ ತ್ರಯೋದಶಿ, ಚತುರ್ದಶಿ ಮತ್ತು ಹುಣ್ಣಿಮೆಯಂದು ಕಲ್ಯಾಣ ಪರ್ವ, ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ಯುಗಾದಿಯಿಂದ 3 ದಿವಸಗಳ ಕಾಲ ನಡೆಸಿಕೊಂಡು ಬರುತ್ತಿರುವ ಹೆಗ್ಗಳಿಕೆ ಪೂಜ್ಯ ಮಾತಾದ್ವಯರದು.

1970ನೆಯ ಇಸವಿಯ ಚೈತ್ರ ಪೌರ್ಣಿಮೆಯಂದು ಪ್ರಥಮ ಪೀಠಾರೋಹಣವಾಗಿ ನಂತರ ಆಗಾಗ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದೆಯಾದರೂ 2010ರಿಂದ ಇನ್ನು ಮುಂದೆ ಪ್ರತಿವರ್ಷವೂ ಅಕ್ಕಮಹಾದೇವಿ ಶರಣೋತ್ಸವವನ್ನು 3 ದಿವಸಗಳ ಕಾಲ ಹಮ್ಮಿಕೊಳ್ಳಬೇಕೆಂಬ ಸಂಕಲ್ಪ ತಾಳಲಾಗಿದೆ. ಇದಕ್ಕೆ ಶರಣ ಬಂಧುಗಳ ಒತ್ತಾಸೆಯೂ ಇದೆ. 2014ರ ಮೇ 23 ಮತ್ತು 24ರಂದು ಕರ್ನಾಟಕ ವಿದ್ಯಾವರ್ಧಕ ಸಂಘದ ಪಾಟೀಲ್ ಪುಟ್ಟಪ್ಪ ಸಭಾಭವನದಲ್ಲಿ. ಶುಕ್ರ(ಮಾತೃ)ವಾರ ದಿ.23-5-2014ರಂದು ಬೆಳಿಗ್ಗೆ 10-30ರಿಂದ ಉದ್ಘಾಟನೆ, ಮಧ್ಯಾಹ್ನ 3-30ರಿಂದ ಧರ್ಮಚಿಂತನಗೋಷ್ಠಿ, ಸಂಜೆ 6 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ವಚನಾಭಿನಯ. ದಿ. 24-5-2014ರಂದು ಬೆಳಿಗ್ಗೆ 10-30ರಿಂದ ಲಿಂಗಾಯತ ಧರ್ಮ-ಸಾಂವಿಧಾನಿಕ ಮಾನ್ಯತೆ ಕುರಿತು ಚಿಂತನೆ, 3-30ರಿಂದ 5ರವರೆಗೆ ಧರ್ಮಚಿಂತನಗೋಷ್ಠಿ-2, ನಂತರ 5ರಿಂದ ಮೆರವಣಿಗೆ. ದಿ.25-5-2014ರಂದು ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಪೀಠಾರೋಹಣ, ಸಮಾರೋಪ ಸಮಾರಂಭ ಬೆಳಿಗ್ಗೆ 10-30ರಿಂದ.

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆಯುತ್ತಿರುವ ಮೂರು(3) ದಿವಸಗಳ ಈ ಕಾರ್ಯಕ್ರಮಕ್ಕೆ ಆಗಮಿಸುವ ಶರಣ ಬಂಧುಗಳಿಗೆ ಪ್ರಸಾದ (ಊಟ) ಮತ್ತು ವಸತಿಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಆದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ನೆರವು ಕೋರುತ್ತೇವೆ. ದೇಣಿಗೆ ಕೊಡುವವರಿಗೆ ಕೆಳಗಿನಂತೆ ಅವಕಾಶವಿದೆ.
ಒಂದು ಹೊತ್ತಿನ ಉಪಾಹಾರ, ಊಟದ ಖರ್ಚನ್ನು ಒಬ್ಬೊಬ್ಬರೇ ವಹಿಸಿಕೊಳ್ಳಬಹುದು.

ಮಹಾಪೋಷಕರು	5000ರೂ	ಹಿತೈಷಿಗಳು	500ರೂ
ಪೋಷಕರು	3000ರೂ	ವಿಶೇಷ ಸದಸ್ಯರು	250ರೂ
ದಾನಿಗಳು	1000ರೂ	ಸಾಮಾನ್ಯ ಸದಸ್ಯರು	150ರೂ

ದವಸ -ಧಾನ್ಯ, ಬೆಲ್ಲ - ಸಕ್ಕರೆ ಇತ್ಯಾದಿ ಪದಾರ್ಥಗಳನ್ನು ದೇಣಿಗೆಯಾಗಿ ನೀಡಬಹುದು. ಉದಾರವಾಗಿ ದೇಣಿಗೆ ನೀಡುವುದಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂದು [illegible]ವೆವು.

ಅಕ್ಕನ ಅಮರವಾಣಿ

– ಮಾತಾಜಿ

ಭಾಗ–2

25. ವಿಲಕ್ಷಣ ಶೃಂಗಾರ

ಎಲ್ಲರ ಗಂಡರ ಶೃಂಗಾರದ ಪರಿಯಲ್ಲ,
ಎನ್ನ ನಲ್ಲನ ಶೃಂಗಾರದ ಪರಿ ಬೇರೆ
ಶಿರದಲ್ಲಿ ಕಂಕಣ, ಉರದಮೇಲಂದುಗೆ, ಕಿವಿಯಲ್ಲಿ ಹಾವುಗೆ
ಉಭಯ ಸಿರಿವಂತನ ಮೊಳಕಾಲಲ್ಲಿ ಜಳವಟ್ಟಿಗೆ.
ಉಂಗುಟದಲ್ಲಿ ಮೂಕುತಿ–ಇದು ಜಾಣರಿಗೆ ಜಗುಳಿಕೆ
ಚನ್ನಮಲ್ಲಿಕಾರ್ಜುನಯ್ಯನ
ಶೃಂಗಾರದ ಪರಿ ಬೇರೆ.

ಅಕ್ಕನವರ ಗಂಡ ವಿಲಕ್ಷಣ ವ್ಯಕ್ತಿ; ಅವನ ಶೃಂಗಾರವೂ ವಿಚಿತ್ರ. ಕೈಯಲ್ಲಿ ಹಾಕುವ ಕಂಕಣವನ್ನು ತಲೆಯ ಮೇಲೆ ಹಾಕಿದ್ದಾನೆ. ಮುಂಗಾಲಲ್ಲಿ ಹಾಕುವ ಕಾಲಂದುಗೆಯನ್ನು ಎದೆಯ ಮೇಲೆ ಕೊರಳ ಸುತ್ತ ಹಾಕಿದ್ದಾನೆ. ಪಾದದಲ್ಲಿ ಹಾಕುವ ಹಾವುಗೆಯನ್ನು ಕಿವಿಯಲ್ಲಿ ಧರಿಸಿದ್ದಾನೆ. ಅವನು ಲೌಕಿಕ ಪಾರಮಾರ್ಥ ಎರಡರಲ್ಲೂ ಸಿರಿವಂತ. ಅವನ ಮೊಳಕಾಲಲ್ಲಿ ಜಳವಟ್ಟಿಗೆ, ಹೆಬ್ಬೆರಳಿನಲ್ಲಿ ಮೂಗುತಿ ಇದೆ. ಈ ವೇಷ ಜಾಣರಿಗೆ ಒಂದು ಒಗಟು. ಇದು ಚನ್ನಮಲ್ಲಿಕಾರ್ಜುನನ ಶೃಂಗಾರದ ಬಗೆ.

ತಲೆಯಲ್ಲಿ ಅಪಾರ ಜ್ಞಾನ (ಕಂಕಣ, ಹೃದಯದಲ್ಲಿ ಸದ್ಭಾವ (ಕಾಲಂದುಗೆ), ಕಿವಿಯಲ್ಲಿ ನಾದಪ್ರಿಯತೆ (ಹಾವುಗೆ), ಮೊಳಕಾಲಲ್ಲಿ ಸದಾಚಾರ (ಜಳವಟ್ಟಿಗೆ), ಹೆಬ್ಬೆರಳಿನಲ್ಲಿ ತಪಶ್ಶಕ್ತಿ (ಮೂಗುತಿ) ಹೀಗೆ ಯೋಗಿರಾಜ ಶಿವನು ಭೂಷಿತನಾಗಿದ್ದಾನೆ.

26. ವಿಭೂತಿಯ ಮಹಿಮೆ

ಹಿತವಿದೆ ಸಕಲಲೋಕದ ಜನಕ್ಕೆ
ಮತವಿದೆ ಶ್ರುತಿಪುರಾಣಾಗಮದ
ಗತಿಯಿದೆ ಬಕುತಿಯ ಬೆಳಗಿನುನ್ನತಿಯಿದೆ
ಶ್ರೀವಿಭೂತಿಯ ಪೂಸಿದಡೆ ಭವವ ಪರಿವುದು;
ದುರಿತಸಂಕುಳವನೊರಸುವುದು;
ಹರನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಲ್ಲಿರಿಸುವುದು
ನಿರುತವಿದು ನಂಬು ಮನುಜಾ, ಜನಭೀತಿ ಈ ವಿಭೂತಿ
ಮರಣಭಯದಿಂದ ಅಗಸ್ತ್ಯ ಕಾಶ್ಯಪ ಜಮದಗ್ನಿಗಳು
ಧರಿಸಿದರಂದು ನೋಡಾ.
ಶ್ರೀಶೈಲಚನ್ನಮಲ್ಲಿಕಾರ್ಜುನನ ಒಲಿಸುವ ವಿಭೂತಿ.

ವಿಭೂತಿ ಧಾರಣೆಯಿಂದ ಸಕಲ ಲೋಕದ ಜನರಿಗೆ ಹಿತವಿದೆ; ಇದಕ್ಕೆ ಶ್ರುತಿ ಆಗಮ ಪುರಾಣಗಳ ಬಲುಮೆ ಇದೆ; ಇದರಿಂದ ಸದ್ಗತಿಯಿದೆ, ಭಕ್ತಿಯ ಬೆಳಗಿನ ಉನ್ನತಿಯಿದೆ.

ಶ್ರೀ ವಿಭೂತಿಯ ಪೂಸಿಕೊಂಡರೆ ಅದು ಭವಬಂಧನವ ಬಿಡಿಸುವುದು; ಪಾಪ ಸಮೂಹವನ್ನು ಒರೆಸುವುದು–ನಿವೃತ್ತಿ ಮಾಡುತ್ತದೆ. ಶಿವನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಲ್ಲಿ ಇರಿಸುತ್ತದೆ. ಇದನ್ನು ನಂಬಬೇಕು. ಈ ವಿಭೂತಿ ಜನಪ್ರಿಯತೆಯನ್ನು ಗಳಿಸುತ್ತದೆ. ಮರಣ ಭಯವನ್ನು ನಿವಾರಿಸಿಕೊಳ್ಳಲು ಅಗಸ್ತ್ಯ, ಕಶ್ಯಪ, ಜಮದಗ್ನಿ ಋಷಿಗಳು ವಿಭೂತಿಯನ್ನು ಧರಿಸಿದರು. ವಿಭೂತಿಯು ಚನ್ನಮಲ್ಲಿಕಾರ್ಜುನನನ್ನು ಒಲಿಸುವ ಸಾಧನ.

27. ದೇವ ಶರಣಾಗತಿ

ಸಂಸಾರವೆಂಬುದು ಹಗೆಯಯ್ಯ ಎನ್ನ ತಂದೆ
ಎನ್ನ ವಂಶವಂಶದಪ್ಪದೆ ಅರಸಿಕೊಂಡು ಬರುತ್ತಿದೆಯಯ್ಯಾ
ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯಾ
ನಿನ್ನ ಮೊರೆಹೊಕ್ಕೆ ಕಾಯಯ್ಯಾ
ಎನ್ನ ಬಿನ್ನಪವನವಧರಿಸಾ, ಚೆನ್ನಮಲ್ಲಿಕಾರ್ಜುನ (ಲಿಂಗದೇವಾ)

ಸಂಸಾರ ಎಂದರೆ ನಾನಿನ ಸರಪಳಿ, ನಾನು ನನ್ನದು ನನ್ನಿಂದ ನನಗೆ ನನಗಾಗಿ ಎಂಬ ಸರಪಳಿ ಇದು. ಇದು ಜೀವಾತ್ಮನ ಶತ್ರು, ಇದು ಜನ್ಮ ಜನ್ಮಾಂತರಕ್ಕೆ ಕಾರಣವಾಗುವುದು. ವಂಶಾಭಿವೃದ್ಧಿಗೆ ಕಾರಣವಾಗುವುದು. ಹೇಗೆಂದರೆ ಲೌಕಿಕ ಜನರು ನಮ್ಮ ವಂಶ ಉಳಿಯಬೇಕು ಎಂದು ಪಡಿಪಾಟಲು ಪಡುವರು. ವಂಶೋತ್ಪತ್ತಿಗಾಗಿ ಮದುವೆಯಾಗುವರು, ಮಕ್ಕಳನ್ನು ಹೆರುವರು. ಈ ಅಹಂ ಜೀವಾತ್ಮನನ್ನು ಬೆನ್ನು ಹತ್ತಿ ಕಾಡುತ್ತದೆ. ಅನ್ಯ ಮಾರ್ಗವಿಲ್ಲದೆ ದೇವಾ ನಿನ್ನ ಮೊರೆ ಹೊಕ್ಕಿದ್ದೇನೆ, ರಕ್ಷಿಸು. ನನ್ನ ಮೊರೆಯನ್ನು ಕೇಳು ಚನ್ನಮಲ್ಲಿಕಾರ್ಜುನ.

28. ವ್ಯರ್ಥ ಪ್ರಯತ್ನ

ಒಬ್ಬನ ಮನೆಯಲುಂಡು ಒಬ್ಬನ ಮನೆಯಲುಟ್ಟು
ಒಬ್ಬನ ಬಾಗಿಲ ಕಾದಡೆ ನಮಗೇನಯ್ಯಾ?
ನೀನಾರಿಗೊಲಿದಡೂ ನಮಗೇನಯ್ಯಾ?
ಚನ್ನಮಲ್ಲಿಕಾರ್ಜುನಾ,
ಭಕ್ತಿಯ ಬೇಡಿ ಬಾಯಿ ಬೂತಾಯಿತ್ತು.

ಶಿವನಿಗೆ ಪ್ರಾರ್ಥನೆ ಸಲ್ಲಿಸಿ ಸೋತು ಹೋದ ಮಹಾದೇವಿ ಶಿವನೊಡನೆ ಮುನಿಸಿ ಕೊಂಡಿದ್ದಾಳೆ. ಬೇಸರದಿಂದ ಹೇಳುತ್ತಾಳೆ. "ಸಿರಿಯಾಳನ ಮನೆಯಲ್ಲಿ ಉಂಡು, ದೇವರ ದಾಸಿಮಯ್ಯನ ಬಳಿ ವಸ್ತ್ರವನ್ನು ಪಡೆದು ಉಟ್ಟು. ಬಾಣಾಸುರನ ಮನೆಯ ಬಾಗಿಲು ಕಾಯ್ದಿರುವುದನ್ನು ಪುರಾಣಗಳಲ್ಲಿ ಓದಿದ್ದೇವೆ. ಇದರಿಂದ ನನಗೇನು ಲಾಭ?! ನೀನು ಯಾರಿಗೆ ಒಲಿದರೆ ನಮಗೆ ಏನಾಗಬೇಕು? ಚನ್ನಮಲ್ಲಿಕಾರ್ಜುನಯ್ಯ, ಮುಕ್ತಿಯ ಮಾತು ಅತ್ತಲಿರಲಿ ಭಕ್ತಿಯನ್ನು ಕೊಡು ಎಂದರೂ ಕೊಡುತ್ತಲಿಲ್ಲ. ನಾನು ಭಕ್ತಿಯನ್ನು ಬೇಡಿ ಬೇಡಿ ನನ್ನ ಬಾಯಿಯೇ ದಣಿಯಿತು. ನನ್ನ ಬೇಡಿಕೆ ವ್ಯರ್ಥವಾಯಿತು.

29. ಕೃತಘ್ನರ ನಡೆ

ಹೂವು ಕಂದಿದಲ್ಲಿ ಪರಿಮಳವನರಸುವರೆ?
ಕಂದನಲ್ಲಿ ಕುಂದನರಸುವರೆ?

ಎಲೆ ದೇವ, ಸ್ನೇಹವಿದ್ದ ಠಾವಿನೊಳು ದ್ರೋಹವಾದ ಬಳಿಕ
ಮರಳಿ ಸದ್ಗುಣವನರಸುವರೆ?
ಎಲೆ ದೇವ, ಬೆಂದ ಹುಣ್ಣಿಗೆ ಬೇಗೆಯನಿಕ್ಕುವರೆ?
ಕೇಳಯ್ಯಾ, ಶ್ರೀಶೈಲ ಚೆನ್ನಮಲ್ಲಿಕಾರ್ಜುನಾ
ಹೊಳೆಯಿಳಿದ ಬಳಿಕ ಅಂಬಿಗಂಗೇನುಂಟು?

ಅಕ್ಕಮಹಾದೇವಿಯ ಜೀವನದಲ್ಲಿ ಏನೋ ಘಟನೆ ನಡೆದಿದೆ; ಆಕೆಯ ವಿಶ್ವಾಸಕ್ಕೆ ಯಾರೋ ದ್ರೋಹ ಬಗೆದಿದ್ದಾರೆ. ಅದು ಈ ವಚನದಲ್ಲಿ ಅಭಿವ್ಯಕ್ತವಾಗಿದೆ. ಹೂವು ಬಾಡಿದಾಗ ಅದರಲ್ಲಿ ಸುವಾಸನೆ ಹುಡುಕಲು ಸಾಧ್ಯವಿಲ್ಲ. ಎಳೆಯ ಮಗುವಿನಲ್ಲಿ ಯಾವುದೇ ದೋಷವನ್ನು ಹುಡುಕಲು ಸಾಧ್ಯವಿಲ್ಲ. ಸ್ನೇಹ-ವಿಶ್ವಾಸ ಇರುವ ಸ್ಥಳದಲ್ಲಿ ದ್ರೋಹವಾದ ಬಳಿಕ ಮತ್ತೆ ಅಲ್ಲಿ ಸದ್ಗುಣವನ್ನು ಹುಡುಕಲು ಸಾಧ್ಯವೇ? ಅದನ್ನು ನೆನಪು ಮಾಡಿಕೊಂಡರೆ ಸುಟ್ಟು ಗಾಯವಾಗಿ ಹುಣ್ಣಾದ ಜಾಗಕ್ಕೆ ಪುನಃ ಬೆಂಕಿಯನ್ನು ಇಟ್ಟಂತೆ ಆಗುವುದು. ಚನ್ನಮಲ್ಲಿಕಾರ್ಜುನಾ, ಈ ಜಗತ್ತಿನ ನಡೆ ಹೇಗೆಂದರೆ ಮಾಡಿದ ಉಪಕಾರವನ್ನು ಬೇಗನೆ ಮರೆಯಲಾಗುವುದು-ತೊರೆ ಇಳಿದು ನಡೆಯಲು ಸಾಧ್ಯವಾಗುತ್ತಿದ್ದಂತೆಯೇ ಅಂಬಿಗನನ್ನು ಮರೆಯುವಂತೆ!

30. ದೇವನೊಲಿವುದು ಇನ್ನೇಕೆ ತಡ?

ತನುವನುವಾಯಿತ್ತು, ಮನವನುವಾಯಿತ್ತು
ಪ್ರಾಣವನುವಾಯಿತ್ತು
ಮುನಿದುಬಾರದ ಪರಿ ಇನ್ನೆಂತು ಹೇಳಾ?
ಎನ್ನ ಪ್ರಾಣದಲ್ಲಿ ಸಂದು, ಎನ್ನ ಮನಕ್ಕೆ ಮನವಾಗಿ ನಿಂದ
ಎನ್ನ ದೇವ ಚೆನ್ನಮಲ್ಲಿಕಾರ್ಜುನ(ಲಿಂಗದೇವ)ನ ಕಾಣದಡೆ
ಆನೆಂತು ಬದುಕುವೆನಯ್ಯಾ?

"ನನ್ನ ಶರೀರ ದೈವೀಕ್ರಿಯೆಗಳನ್ನು ಮಾಡುತ್ತ ಸದಾಚಾರದಿಂದ ಪರಿಶುದ್ಧವಾಗಿ ದೈವೀಕಾರುಣ್ಯ ಅವತೀರ್ಣವಾಗಲು ಅನುವಾಗಿದೆ. ನನ್ನ ಮನಸ್ಸು ದೇವನ ನೆನಹಿನಿಂದ ನಿರ್ಮಲವಾಗಿ ದೈವೀಕಾರುಣ್ಯ ಇಳಿದು ಬರಲು ಪಕ್ವವಾಗಿದೆ. ನನ್ನ ಪ್ರಾಣ ದೇವನ ಅನುಸಂಧಾನದಲ್ಲೇ ತೊಡಗಿ ಅವನ ಕಾರುಣ್ಯವನ್ನು ಪಡೆದುಕೊಳ್ಳಲು ಸಿದ್ಧವಾಗಿದೆ. ಹೀಗಿದ್ದಾಗ ದೇವನು ಮುನಿಸಿಕೊಂಡು ನನ್ನ ಬಳಿ ಬಾರದಿದ್ದರೆ ಏನು ಮಾಡಲಿ? ನನ್ನ ಪ್ರಾಣಕ್ಕೆ ಪ್ರಾಣಸ್ವರೂಪವಾಗಿ ಮನವನ್ನೆಲ್ಲ ವ್ಯಾಪಿಸಿಕೊಂಡಿರುವ ಎನ್ನ ದೇವ ಚನ್ನಮಲ್ಲಿಕಾರ್ಜುನ ಲಿಂಗದೇವನ ಕಾಣದಿದ್ದರೆ ನಾನೆಂತು ಬದುಕಲು ಸಾಧ್ಯ?" ಎಂದು ಅಕ್ಕನವರು ಅಲವತ್ತುಕೊಳ್ಳುತ್ತಾರೆ.

31. ದೇವ ವಿರಹ-ಸ್ವರ ವಚನ, ರಾಗ-ಮಧುಮಾಧವಿ

ಏನೋ ನಮ್ಮ ನಲ್ಲ ನೀ ಮನೆಗೇಕೆ ಬಾರೆ?
ನಾನೇನು ತಪ್ಪು ಮಾಡಿದುದಿಲ್ಲ

ಕೂಸಿನ ತಾಯಿಗೆ ಹೇಸದೊತ್ತೆಯ ಕೊಟ್ಟು

ಕೂಸತ್ತೆನ್ನಯ ನಲ್ಲ ಬೇಸತ್ತು ಹೋದೆ
ಮನವುಳ್ಳ ಭಾವಕಿಗನುವಾಗಿ ನಮ್ಮ ನಲ್ಲ
ಮನ ಸಂಚಲವಾಗಲನುವಾದುದಿಲ್ಲ

ಒತ್ತೆಯ ನಲ್ಲನ ತೋಳ ಮೇಲೊರಗಿದೆ
ಚಿತ್ತದ ನಲ್ಲನ ಕನಸಿನಲಿ ಕಂಡೆ
ಕೇಳಯ್ಯ ಶ್ರೀಶೈಲ ಮಲ್ಲಿಕಾರ್ಜುನ
ನೀನು ಮಾತಾಡಿದುದುಂಟು ಕೂಡಿದುದಿಲ್ಲ

ಪ್ರಿಯತಮನೆ, ನೀನು ನನ್ನ ಮನೋಮಂದಿರಕ್ಕೆ ಏಕೆ ಬರುತ್ತಿಲ್ಲ? ನಾನು ಯಾವ ತಪ್ಪನ್ನೂ ಮಾಡಿಲ್ಲ. ಭಕ್ತಿ ಎಂಬ ಮಗುವನ್ನು ಹೆತ್ತಿರುವ ನನಗೆ ಪ್ರೀತಿ ಇಂದ ಒತ್ತೆಯಕೊಟ್ಟು ದೂರ ಹೋಗಿಬಿಟ್ಟೆ. ನಾನು ನಿನ್ನ ಬರವನ್ನು ನಿರೀಕ್ಷಿಸುತ್ತ ಕೂಸತ್ತು (ದಣಿದು), ಬೇಸತ್ತು ಹೋದೆ. ಸಂವೇದನಾಶೀಲಳಾದ ಭಾವಕಿ ನಾನು, ನನ್ನ ಮನಸ್ಸು ನಿನ್ನ ಬಿಟ್ಟು ಅನ್ಯಕ್ಕೆ ಮನಸೋಲದು. ನಿನ್ನನ್ನು ಬರೀ ಕನಸಿನಲ್ಲಿ ಕಾಣವುದೇ ಆಗಿದೆ. ಕನಸಿನಲ್ಲಿ ನಲ್ಲನ ತೋಳಿನ ಮೇಲೆ ಒರಗಿದೆ; ಕನಸಿನಲ್ಲಿ ಅವನನ್ನು ಕಣ್ತುಂಬ ಕಂಡೆ, ಮನತುಂಬಿ ಮಾತನಾಡಿದೆ. ಆದರೆ ಅವನು ನನ್ನನ್ನು ಕೂಡಲಿಲ್ಲ.

32. ಶಿವನ ಸ್ತುತಿ

(ವಿಶೇಷ ವಿವರಣೆ: ಪೌರಾಣಿಕ ಮತ್ತು ಐತಿಹಾಸಿಕ ಶಿವನಿಗೂ ಸೃಷ್ಟಿಕರ್ತ ಪರಶಿವ (ಲಿಂಗದೇವ) ನಿಗೂ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿಯುವ ಮುನ್ನ ಈ ಸ್ವರವಚನವನ್ನು ಅಕ್ಕನವರು ಬರೆದಿರುವ ಕಾರಣ ಶಿವನ ವರ್ಣನೆ ಒಮ್ಮೆ ಮಾಡಿದರೆ ನಿರಾಕಾರನಾದ ಲಿಂಗದೇವನ ವರ್ಣನೆ ಒಮ್ಮೆ ಮಾಡುತ್ತಾರೆ. ಅನೇಕ ಶರಣರಲ್ಲಿ ಇಂಥ ದ್ವಂದ್ವವನ್ನು ಕಾಣುತ್ತೇವೆ.)

ಲಿಂಗ ಬಾರೋ ಮಂಗಳನೆ ಪರಮ ನಿರಂಗಿ ಬಾರೋ।
ಹಿಂಗದೆನ್ನಂಗದೊಳವಿರಳವಾದ ಸುಸಂಗಿ ಬಾರೋ ॥ ॥ ಪಲ್ಲವಿ ॥

ಲಿಂಗದೇವನೆ ಬಾರೋ ಮಂಗಳ ಸ್ವರೂಪನೆ. ಪರಮ ಉನ್ನತನೇ ಅಂಗ(ಶರೀರ)ವಿಲ್ಲದ ನಿರಾಕಾರನೆ ಬಾರೋ! ಬಿಟ್ಟು ಬಿಡದೆ ಎನ್ನ ಅಂಗದಲ್ಲಿ ಅವಿರಳವಾಗಿ ನೆಲೆಸಿರುವ ಸುಸಂಗಿ ಬಾರೋ !

ಪ್ರಣವ ಪಂಚಾಕ್ಷರಿಯ ಮಂತ್ರಂಗಳ ಗುಣಮಣಿಯೆ ಬಾರೊ।
ಗಣನೆಗೆ ಬಾರದ ಎಣೆಯಿಲ್ಲದಪರ ಧಣಿಯೆ ಬಾರೊ॥
ಫಣಿ ಕುಂಡಲ ಕಂಕಣಭೂಷಣ ಸದ್ಗುಣಿಯೆ ಬಾರೊ।
ಅಣಿಮಾದ್ಯಷ್ಟಸಿದ್ಧಿಯನೆಲ್ಲವನೀವ ತ್ರಿಣಯ ಬಾರೊ॥ ॥ 1 ॥

ಪ್ರಣವ ಪಂಚಾಕ್ಷರಿಯಾದ ಓಂ ನಮಃ ಶಿವಾಯದ ಅಧಿದೇವತೆಯೆ ಬಾರೊ। ಎಣಿಕೆಗೆ ಬಾರದ ಹೋಲಿಕೆ ಕೊಡಲಾಗದ ಅಪರ ಧಣಿ (ಒಡೆಯನೆ)ಯೆ ಬಾರೊ। ಹಾವುಗಳನ್ನು ಕಿವಿಯಲ್ಲಿ ಕುಂಡಲವಾಗಿ ಕೈಯಲ್ಲಿ ಕಂಕಣವಾಗಿ ಧರಿಸಿದ ಸದ್ಗುಣಿಯೆ ಬಾರೊ। ಅಣಿಮಾದಿಯಾಗಿ ಅಷ್ಟಸಿದ್ಧಿಗಳನ್ನು ಕೊಡಬಲ್ಲ ಮೂರುಕಣ್ಣುಳ್ಳವನೆ ಬಾರೊ॥ ॥ 1 ॥

ಉಪಮಿಸಬಾರದ ಅಪರಾಪರ ನಿತ್ಯಕೃಪೆಯೆ ಬಾರೊ

ಸುಪಥ ಸದ್ಭಕ್ತರ ಕೃಪೆಯಿಂದ ರಕ್ಷಿಪ ನಿಪುಣ ಬಾರೊ॥
ಅಪರಿಮಿತಾನಂದ ವಿಪರೀತ ಚರಿತದ ಸುಪಥ ಬಾರೊ।
ಅಪಾರ ಮಹಿಮನೆ ಉಪಮಾತೀತನಪ್ರತಿಮ ಬಾರೊ॥ ॥ 2 ॥

ಹೋಲಿಕೆ ಕೊಡಲು ಸಾಧ್ಯವಿಲ್ಲದ ಲೌಕಿಕ ಅಲೌಕಿಕ ಇಷ್ಟಾರ್ಥಗಳನ್ನು ನೀಡಬಲ್ಲವನೆ ಬಾರೊ। ಸುಪಥದಲ್ಲಿ ನಡೆಯುವ ಸದ್ಭಕ್ತರನ್ನು ಅನುಗ್ರಹಿಸಿ ರಕ್ಷಿಸುವ ನಿಪುಣ ಬಾರೊ। ಅಪರಿಮಿತ ಆನಂದ ಸ್ವರೂಪನಾದ ಅಸಾಮಾನ್ಯ ಚರಿತ್ರೆಯ ಸತ್ಪಥದವನೆ ಬಾರೊ। ಅಪಾರ ಮಹಿಮೆಯುಳ್ಳವನೆ ಉಪಮಾತೀತನೆ ಅಪ್ರತಿಮನೆ ಬಾರೊ। ॥ 2 ॥

ಪರಮ ಪ್ರಕಾಶದ ಪರಮಾನಂದದ ಪರವೆ ಬಾರೊ।
ಪರಮತದುಪರತತ್ವ ಸ್ವರೂಪದ ಇರವೆ ಬಾರೊ॥
ಗುರುಕರುಣಾಮೃತ ಶರಧಿಯ ಸುತ್ತಿದ ಗುರುವೆ ಬಾರೊ।
ಗುರು ಚೆನ್ನಲಿಂಗವೆ ತಾನಾಗಿಪ್ಪ ಸಿರಿಯೆ ಬಾರೊ॥ ॥ 3 ॥

ಪರಮ ಪ್ರಕಾಶದ ಜ್ಯೋತಿಯಾದ ಪರಮಾನಂದದ ಪದವೆ ಬಾರೊ। ಪರಮ ತದುಪರತತ್ವ ಸ್ವರೂಪದ ಇರುವೆ ಬಾರೊ। ಗುರು ಕರುಣೆಯ ಅಮೃತ ಎಂಬ ಸಮುದ್ರವನ್ನು ಸುತ್ತಿದ ಗುರುವೆ ಬಾರೊ। ಗುರುವೆಂಬ ಚಿನ್ಮಯ ಮೂರ್ತಿಯೇ ತಾನಾಗಿರುವ ಸಿರಿಯೆ ಬಾರೊ॥

ವೇದ ಪುರಾಣ ಭೇದಿಸಬಾರದಭೇದ್ಯ ಬಾರೊ।
ಆದಿಯಿಂದತ್ತತ್ತ ನಿತ್ಯಾನಂದವಿನೋದಿ ಬಾರೊ।
ಮೂದೇವರ ಕುಲತಿಲಕನೆಂದೆನಿಸುವಸಾಧ್ಯ ಬಾರೊ।
ನಾದ ಬಿಂದುಗಳ ಗತಿಯೆ ತಾನಾದ ಸುನಾದ ಬಾರೊ। ॥ 4 ॥

ವೇದಶಾಸ್ತ್ರ ಪುರಾಣಗಳು ಭೇದಿಸಲಾರದ ಅಭೇದ್ಯನಾದ ದೇವ ಬಾರೊ। ಸೃಷ್ಟಿಯ ರಚನೆಯಾದ ಆದಿ ಕಾಲದಿಂದ ಅತ್ತತ್ತ ಇರುವ ನಿತ್ಯಾನಂದದಲ್ಲಿ ವಿನೋದಿಯಾಗಿರುವ ದೇವ ಬಾರೊ॥ ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳಿಗೆ ಅತೀತನಾಗಿರುವ ದೇವ ಬಾರೊ। ನಾದ ಮತ್ತು ಬಿಂದುಗಳ ಸ್ವರೂಪವೇ ತಾನಾದ ಸುನಾದ ಮೂರ್ತಿಯೆ ಬಾರೊ॥

ಅತ್ಯತಿಷ್ಠದಶಾಂಗುಲವಾಗಿಪ್ಪ ಮಹಂತ ಬಾರೊ।
ನಿತ್ಯ ನಿರಂಜನ ನಿರ್ಮಳ ನಿರುಪಮ ಮೂರ್ತಿ ಬಾರೊ।
ಸತ್ಯ ಸದ್ಗುಣಚರ ಸಂಪತ್ತಿನ ಗೊತ್ತೆ ಬಾರೊ।
ಸತ್ತು ಚಿತ್ತಾನಂದ ನಿತ್ಯ ನಿಜಪದ ಪರವಸ್ತು ಬಾರೊ। ॥ 5 ॥

ಎಲ್ಲಕ್ಕೂ ಮೇಲೆ ಹತ್ತು ಅಂಗುಲದಲ್ಲಿ ಇರುವ ಮಹಾಂತ ಬಾರೊ। ನಿತ್ಯನೂ, ನಿರಂಜನನೂ, ನಿರ್ಮಲನೂ, ನಿರುಪಮ ಮೂರ್ತಿಯಾದವನೆ ಬಾರೊ। ಸತ್ಯ ಸನ್ಮಾರ್ಗದಲ್ಲಿ ಸದ್ಗುಣಗಳಿಂದ ಕೂಡಿದ ಆಚಾರವೆಂಬ ಸಂಪತನ್ನು ಹೊಂದಿದವರ ಗುರಿಯೆ ಬಾರೊ। ಸತ್ತುಚಿತ್ತಾನಂದ ನಿತ್ಯ ನಿಜಪದ ಪರವಸ್ತು ಬಾರೊ।

ಈ ಪದ್ಯದಲ್ಲಿ ನಿರಾಕಾರ ಲಿಂಗದೇವನ ವರ್ಣನೆಯನ್ನು ಸೊಗಸಾಗಿ ಮಾಡಿದ ಅಕ್ಕನವರು ಮುಂದಿನ ಪದ್ಯದಲ್ಲಿ ಶಿವನ ವರ್ಣನೆಗೆ ಜಾರುತ್ತಾರೆ.

ಕಾಮನ ಸುಟ್ಟು ಭಸ್ಮವ ಪೂಸಿದ ನಿಸ್ಸೀಮ ಬಾರೋ।

ಸೋಮ ಸೂರ್ಯಾಗ್ನಿ ಲೋಚನವುಳ್ಳಭವ ನಿಃಕಾಮಿ ಬಾರೋ॥
ಕಾಮಿತ ಫಲಗಳ ಪ್ರೇಮದಿಂದೀವ ನಿರ್ನಾಮ ಬಾರೊ।
ತಾಮಸವಿಲ್ಲದೆ ನೆನೆವರ ಪ್ರೇಮದ ಸ್ವಾಮಿ ಬಾರೊ॥

(ಕಾಮನ ಸುಟ್ಟು ಭಸ್ಮವ ಪೂಸಿದ ನಿಸ್ಸೀಮ ಶಿವನೇ ಹೊರತು ದೇವರಲ್ಲ)

ಕಾಮನ ಸುಟ್ಟು ಭಸ್ಮವ ಪೂಸಿದ ನಿಸ್ಸೀಮ ಬಾರೊ। ಚಂದ್ರ, ಸೂರ್ಯ ಮತ್ತು ಅಗ್ನಿಗಳನ್ನು ಮೂರು ಕಣ್ಣುಗಳಾಗಿ ಹೊಂದಿದ ನಿಃಕಾಮಿ ಬಾರೊ॥ ಭಕ್ತರು ಇಷ್ಟಪಡುವ ಫಲಗಳನ್ನು ಪ್ರೇಮದಿಂದ ಕೊಡುವ ಹೆಸರಿಲ್ಲದವನೆ ಬಾರೊ। ತಾಮಸ ಭಕ್ತಿ ಬಿಟ್ಟು ಸಾತ್ವಿಕವಾಗಿ ನೆನೆಯುವರ ಪ್ರೇಮದ ಒಡೆಯ ಬಾರೊ।

ಬ್ರಹ್ಮಾಂಡ ಕೋಟಿಯನೊಮ್ಮೆ ಪುಟ್ಟಿಸುವ ಸುಧರ್ಮಿ ಬಾರೊ।
ಬ್ರಹ್ಮೇಂದ್ರಾದಿಗಳುಪಮಿಸ ಕಾಣದಗಮ್ಯ ಬಾರೊ॥
ಬ್ರಹ್ಮದಿಂದೊಗೆದ ಶರಣಾನಂದದ ಪೆರ್ಮೆ ಬಾರೊ।
ಬ್ರಹ್ಮಾಂಗವೇ ತಾನಾದ ವಿರಕ್ತರ ಸೊಮ್ಮೆ ಬಾರೊ॥ ॥ 7 ॥

ಬ್ರಹ್ಮಾಂಡ ಕೋಟಿಯನ್ನು ಹುಟ್ಟಿಸುವ ಸುಧರ್ಮಿ ಬಾರೊ। ಬ್ರಹ್ಮ ಇಂದ್ರ ಮುಂತಾದ ದೇವತೆಗಳು ಉಪಮಿಸಲು ಅಸಾಧ್ಯವಾದ ಅಗಮ್ಯ ಬಾರೊ। ಪರಮಾತ್ಮನಿಂದ ಪ್ರಾಪ್ತವಾಗುವ ಶರಣಾನಂದದ ಹೆಮ್ಮೆ ಬಾರೊ। ಪರಮಾತ್ಮನ ಪ್ರತಿರೂಪವಾದ ವಿರಕ್ತರ ಘನ ಸಂಪತ್ತೇ ಬಾರೊ॥

ಚೋಳಿಯಕ್ಕನ ಬಾಯ ತುತ್ತ ಸವಿದ ಶಶಿಮೌಳಿ ಬಾರೊ।
ಚೋಳನಿತ್ತನ್ನವ ಕೈಕೊಂಡ ಕರದ ಕಪಾಲಿ ಬಾರೊ॥
ಕೋಳೂರು ಕೊಡಗೂಸು ತಂದಮೃತವನುಂಡ ಲೀಲ ಬಾರೊ।
ಬಾಲೆ ನಿಂಬಕ್ಕನಿಕ್ಕಿದರುಂಡು ನಲಿದ ಕೃಪಾಳು ಬಾರೊ॥ ॥ 8 ॥

ಚೋಳಿಯಕ್ಕನೆಂಬ ಭಕ್ತೆಯಿಂದ ತುತ್ತನ್ನು ಪಡೆದ ಶಶಿಮೌಳಿ ಬಾರೊ। ಚೋಳರಾಜನು ಇತ್ತ ಅನ್ನವನ್ನು ಕೊಂಡ ಕಪಾಲವನ್ನು ಕರದಲ್ಲಿ ಹಿಡಿದವನೆ ಬಾರೊ। ಕೋಳೂರು ಕೊಡಗೂಸು ಎಂಬ ಮುಗ್ಧಬಾಲೆಯು ತಂದ ಹಾಲೆಂಬ ಅಮೃತವನುಂಡ ಲೀಲಾ ವಿನೋದಿ ಬಾರೊ। ಬಾಲೆ ನಿಂಬಕ್ಕ ಇಕ್ಕಿದ ಊಟವನುಂಡು ನಲಿದ ಕೃಪಾಳು ಬಾರೊ॥

ಕಾಳಿದಾಸಗೆ ಮೂಗಳ ಕಣ್ಣನಿತ್ತ ತ್ರಿಶೂಲಿ ಬಾರೊ।
ಹೇಳದೆ ಹೋದ ನಂಬಿಯಣ್ಣನ ಕುಂಟಣಿಯಾಳೆ ಬಾರೊ॥
ದಾಳಿಯನಿಟ್ಟ ಚೇರಮರಾಯನ ಭಕ್ತಿ ಮೌಳಿ ಬಾರೊ।
ಜಾಳಿಸಿ ಭವವ ನೀಗಿದ ಸದ್ಭಕ್ತರ ಲೋಲ ಬಾರೊ॥ ॥ 9 ॥

ಕಾಳಿದಾಸನಿಗೆ ದಿವ್ಯಜ್ಞಾನ ಎಂಬ ಮೂರನೆಯ ಕಣ್ಣನ್ನು ಕೊಟ್ಟ ತ್ರಿಶೂಲಿ ಬಾರೊ। ಮುನಿಸಿಕೊಂಡು ಹೋದ ನಂಬಿಯಣ್ಣನಿಗೆ ಕುಂಟಣಿಯಾದವನೆ ಬಾರೊ। ಚೇರಮರಾಯನೆಂಬ ಭಕ್ತನಿಗೆ ಒಲಿದ ಮೌಳಿ ಬಾರೊ। ಸದ್ಭಕ್ತರ ಭವವನ್ನು ಜಾಳಿಸಿ ನೀಗಿದ ಸದ್ಭಕ್ತಲೋಲ ಬಾರೊ॥

ಬಸವಪ್ರಮುಖರೊಳಗೆಸೆವ ಅಮ್ಮವ್ವೆಯ ಶಿಶುವೆ ಬಾರೊ।

ಅಸುರಾರಿಯ ನಯನಾರ್ಚಿತ ಪದಪದ್ಮ ಪಶುಪ ಬಾರೊ॥
ಎಸೆವಷ್ಟತನುವ ನಿರ್ಮಿಸಿದ ಸಾಹಸವುಳ್ಳ ಅಸಮ ಬಾರೊ।
ಒಸೆದು ಭಕ್ತರ ಹೃತ್ಕಮಲ ಮಧ್ಯದಿ ನಿಂದ ಸುಳಿಯೆ ಬಾರೊ॥ ॥ 10 ॥

ಬಸವಾದಿ ಪ್ರಮಥರೊಳಗೆ ಬೆಳಗುತ್ತಿರುವ ಬಿಜ್ಜಮಹಾದೇವಿಯ ಶಿಶುವೆ ಬಾರೊ। ಅಸುರಾರಿ ಕೃಷ್ಣನ ಕಣ್ಣುಗಳಿಂದ ಪೂಜಿಸಲ್ಪಟ್ಟ ಪಾದಪದ್ಮ ಉಳ್ಳ ಪಶುಪತಿಯೆ ಬಾರೊ। ಅಷ್ಟತನುಗಳನ್ನು (ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ, ಆತ್ಮ) ನಿರ್ಮಿಸಿದ ಸಾಹಸಿಯಾದ ಯಾರಿಗೂ ಸಮನಲ್ಲದವನೆ ಬಾರೊ। ಭಕ್ತರ ಹೃತ್ಕಮಲ ಮಧ್ಯದಿ ನಿಂದ ಸುಖಿಯೆ ಬಾರೊ॥

ಕಂಗಳನೊಲಿದಿತ್ತ ಕಣ್ಣಪ್ಪನೊಲುಮೆಯ ಲಿಂಗ ಬಾರೊ।
ಹಿಂಗದೆ ಭೋಗಣ್ಣನೊಡನುರುಳಿದ ಸಚ್ಚಿದಂಗ ಬಾರೊ॥
ತುಂಗ ಜಡೆಯಲಿ ಗಂಗೆ ಧರಿಸಿರ್ಪ ನಿಜಾಂಗ ಬಾರೊ।
ಮಂಗಳ ಮೂರುತಿ ಚೆನ್ನಮಲ್ಲೇಶ್ವರ ಲಿಂಗ ಬಾರೊ॥ ॥ 11 ॥

ತನ್ನ ಕಣ್ಣುಗಳನ್ನು ಶಿವಲಿಂಗಕ್ಕೆ ಕಿತ್ತುಕೊಟ್ಟ ಬೇಡರ ಕಣ್ಣಪ್ಪನ ಒಲುಮೆಯ ಲಿಂಗ ಬಾರೊ। ಕೆಂಭಾವಿ ಭೋಗಣ್ಣನೊಡನೆ ಉರುಳುತ್ತ ಹೋದ ಲಿಂಗವೇ ಬಾರೊ॥ ಜಡೆಯಲ್ಲಿ ಗಂಗೆಯನ್ನು ಧರಿಸಿರುವ ನಿಜಾಂಗನೇ ಬಾರೊ। ಮಂಗಳ ಮೂರುತಿ ಚನ್ನಮಲ್ಲೇಶ್ವರ ಲಿಂಗ ಬಾರೊ॥

1. ಈ ಪದದಲ್ಲಿ ಕೈಲಾಸಪತಿ ಶಿವನ ವರ್ಣನೆ, ನಿರಾಕಾರ ನಿರ್ಗುಣನಾದ ಲಿಂಗದೇವನ ವರ್ಣನೆ ಎರಡೂ ಸೇರಿಕೊಂಡಿರುವುದರಿಂದ ಅಕ್ಕನವರು ಲಿಂಗದೇವನ ಪರಿಕಲ್ಪನೆ ಮೂಡುವ ಮುನ್ನ ಬರೆದ ಪದ ಎಂದು ಊಹಿಸಬಹುದು.

2. ಇದು ಅಕ್ಕನವರು ಬರೆದ ಸ್ತುತಿಯೋ ಅಥವಾ ಹರಿಹರ ಕವಿಯು ಮಹಾದೇವಿಯಕ್ಕನ ರಗಳೆಯಲ್ಲಿ ಬರೆದ ಸ್ತುತಿಯೋ ಎಂಬ ಸಂದೇಹವು ನನ್ನನ್ನು ಕಾಡುತ್ತಿದೆ.

33. ನಿರಾಕಾರದ ಪೂಜೆ

ಹೃದಯ ಸರೋಜ ಗದ್ದುಗೆಗೆ । ದಿವ್ಯ
ಸದಮಲ ಗುಣನಿಧಿ ಬಾರಯ್ಯ ದೇವ ॥ ಪಲ್ಲವಿ॥

ಹೃದಯ ಸರೋಜ ಗದ್ದುಗೆಗೆ। ದಿವ್ಯ ಹೃದಯ ಕಮಲ(ಸರೋಜ) ಎಂಬ ಗದ್ದುಗೆಗೆ ದಿವ್ಯ ಸದಮಲ ಗುಣನಿಧಿ ಬಾರಯ್ಯ ದೇವ

ಆನಂದ ಜಲದಿ ಮಜ್ಜನಕೆರೆವೆನು । ಸು
ಜ್ಞಾನದ ಗಂಧವನೊರೆವೆನು ॥
ನಾನು ನೀನೆನ್ನದಕ್ಷತೆಯನೀಡುವೆ । ದಿವ್ಯ
ಜ್ಞಾನದಾರತಿಯನೆತ್ತುವೆ ಬಾರಯ್ಯ ದೇವ ॥ ॥ 1 ॥

ಆನಂದ ಜಲದಿಂದ ನಿನಗೆ ಮಜ್ಜನಕ್ಕೆ ಎರೆಯುತ್ತೇನೆ। ಸುಜ್ಞಾನ ಎಂಬ ಗಂಧವನ್ನು ಲೇಪಿಸುತ್ತೇನೆ. ನಾನು–ನೀನು ಎಂಬ ಭಿನ್ನಭಾವವಿಲ್ಲದ ಏಕೋಭಾವದ ಅಕ್ಷತೆಯನ್ನು ಇಡುವೆ। ದಿವ್ಯಜ್ಞಾನದ ಆರತಿಯನ್ನೆತ್ತುವೆ ಬಾರಯ್ಯ ದೇವಾ॥

ಜ್ಞಾನವೇ ಬೇರುವರಿದ ಮುಡಿವಾಳ । ಸು

ಜ್ಞಾನವೆ ಚಿಗುರ್ದ ಪಚ್ಚೆಯು
ಹೀನತೆಯಳಿದ ಮರುಗ–ದವನಗಳಿಂದ
ನಾನೊಲಿದರ್ಚಿಪೆ ಬಾರಯ್ಯ ದೇವ॥ ॥ 2 ॥

ಜ್ಞಾನವನ್ನೇ ತನ್ನ ಬೇರಾಗಿ ಮಾಡಿಕೊಂಡು ಹರಡಿಕೊಂಡ ಮುಡಿವಾಳದ ಹೂವು। ಸುಜ್ಞಾನವೇ ಚಿಗುರಿದ ಪಚ್ಚೆತೆನೆ। ಹೀನಗುಣಗಳಳಿದು ಉನ್ನತಗುಣ ಅಳವಟ್ಟ ಮರುಗ–ದವನ। ಇವುಗಳಿಂದ ಒಲಿದು ಅರ್ಚಿಸುತ್ತೇನೆ ನಾನು॥

ತನುಪುಳಕದವಿರಳದ ಸೇವಂತಿಗೆ
ನೆನಹು ತಾನಾದ ಜಾಜಿಯು
ಇನಿತಗಲದೆ ಸಂಪಗೆಯರಳುಗಳಿಂದ।
ಮನವೊಲಿದರ್ಚಿಸುವೆ ಬಾರಯ್ಯ ದೇವ॥ ॥ 3 ॥

ಅಕ್ಕಮಹಾದೇವಿಯವರು ಮಲೆನಾಡಿನಲ್ಲಿ ಹುಟ್ಟಿ ಬೆಳದವರಾದ್ದರಿಂದ ಅವರಿಗೆ ಬಗೆಬಗೆಯ ಹೂವು, ಪತ್ರೆಗಳ ಪರಿಚಯವಿದೆ.

ತನುವಿನ ಪುಳಕ ಎಂಬ ಸೇವಂತಿಗೆ, ದೇವನ ನೆನಹು ಎಂಬ ಜಾಜಿ, ಒಂದು ಕ್ಷಣವೂ ಅಗಲದ ಧ್ಯಾನ ಎಂಬ ಸಂಪಿಗೆಯ ಹೂಗಳಿಂದ ಮನಃ ಪೂರ್ವಕವಾಗಿ ಅರ್ಚಿಸುವೆ ಬಾರಯ್ಯ ದೇವಾ.

ಮೂಲಜ್ಞಾನದಿ ದಿವ್ಯರೂಪವನರ್ಚಿಪೆ
ಮೇಲೆ ಬ್ರಹ್ಮಸ್ಥಾನದಲ್ಲಿ
ಶೂಲಿ, ನಿಮಗೆ ನೈವೇದ್ಯವನರ್ಪಿಸುವೆ
ಲಾಲಿತ ತಾಂಬೂಲವನೊಪ್ಪಿಸುವೆ ಬಾರಯ್ಯ ದೇವ॥ ॥ 4 ॥

ಮೂಲಜ್ಞಾನದಿ ದಿವ್ಯರೂಪವನರ್ಚಿಸುವೆ। ಮೇಲೆ ಬ್ರಹ್ಮಸ್ಥಾನದಲ್ಲಿ ನಿಮಗೆ ನೈವೇದ್ಯವನರ್ಪಿಸುವೆ ಉಲ್ಲಾಸ ಎಂಬ ತಾಂಬೂಲವ ಸಲ್ಲಿಸುವೆ ಬಾರಯ್ಯ ದೇವಾ.

ಆಟ ನೋಟದ ಬೇಟ ಕೂಟದ ಶಿಶುವಿದ
ರಾಟವೇ ತಾನು ತಾನಾಗಿ।
ನಾಟಿ ಮನದ ಕೊನೆಯೊಳು ನೆಲೆಸಿಹ ಶಶಿ।
ಜೂಟಿ ಚೆನ್ನಮಲ್ಲಿಕಾರ್ಜುನ ಬಾರಯ್ಯ ದೇವ॥

ನನ್ನ ಮನಸ್ಸೆಂಬ ಶಿಶುವು ಬಗೆಬಗೆಯ ಆಟವನ್ನಾಡುತ್ತಿದೆ. ನೋಟ, ಬೇಟ, ಕೂಟ ಈ ಶಿಶುವಿನ ಆಟ. ನನ್ನ ಮನದ ಕೊನೆಯೊಳು ನೆಲೆಸಿಹ, ಚಂದ್ರನನ್ನು ಜಟೆಯ ಮೇಲೆ ಇಟ್ಟುಕೊಂಡ ಚನ್ನಮಲ್ಲಿಕಾರ್ಜುನ ದೇವ ಬಾರಯ್ಯ.

34. ಅಕ್ಕ ಕಂಡ ಕನಸು

ಕೇಳವ್ವಾ ಕೇಳವ್ವಾ ಕೆಳದಿ, ನಾನೊಂದು ಕನಸ ಕಂಡೆ
ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು

ಬಂದೆನ್ನ ನೆರೆದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು.
ಚನ್ನಮಲ್ಲಿಕಾರ್ಜುನಯ್ಯನ, ಕಂಡು
ಕಣ್ಣು ಮುಚ್ಚಿ ತೆರೆದು ತಳವೆಳಗಾದೆನು.

ಜಾಗೃತ ಜೀವನದಲ್ಲಿ ಅನುಭವಿಸಿದ ಅನೇಕ ಅನುಭವಗಳು ಸ್ವಪ್ನದಲ್ಲಿ ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತವೆ. ಜಾಗೃತ ಜೀವನದಲ್ಲಿ ತೃಪ್ತವಾಗದ ಅನೇಕ ಬಯಕೆಗಳು ಕನಸಿನಲ್ಲಿ ಕೆಲವೊಮ್ಮೆ ತೃಪ್ತಿಗೊಳ್ಳುತ್ತವೆ. ಕನಸುಗಳಲ್ಲಿ ಸಾಮಾನ್ಯ ಕನಸುಗಳು, ದೈವೀ ಕನಸುಗಳು, ಭವಿಷ್ಯ ಸೂಚಕ ಕನಸುಗಳು ಎಂದು ಗುರುತಿಸಬಹುದು. ಸಾಮಾನ್ಯ ಕನಸುಗಳಿಗೆ ವಿಶೇಷ ಅರ್ಥವಿರುವುದಿಲ್ಲ. ದೈವೀ ಕನಸುಗಳಲ್ಲಿ ದಿವ್ಯ ಜೀವನಕ್ಕೆ ಸಂಬಂಧಪಟ್ಟ ದೃಶ್ಯ ಕಾಣಬರುತ್ತದೆ. ಭವಿಷ್ಯ ಸೂಚಕ ಕನಸುಗಳಲ್ಲಿ ಮುಂದೆ ಆಗಲಿರುವ ಘಟನೆಗಳ ಮುನ್ಸೂಚನೆ ಇರುತ್ತದೆ.

ಅಕ್ಕನವರು ಚನ್ನಮಲ್ಲಿಕಾರ್ಜುನ (ಶಿವ)ನ ದರ್ಶನ, ಸ್ಪರ್ಶನ, ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದಾರೆ. ಜಾಗೃತ ಜೀವನದಲ್ಲಿ ಈ ದಿವ್ಯಾನುಭವ ಲಭ್ಯವಾಗಿಲ್ಲ. ಅದೇ ಹಂಬಲದಲ್ಲಿ ನಿದ್ರಾವಶರಾಗಿದ್ದಾರೆ. ಆಗ ಈ ಕನಸನ್ನು ಕಾಣುತ್ತಿದ್ದಾರೆ. ಕನಸಿನ ಅನುಭವವನ್ನು ತಮ್ಮ ಸಲುಗೆಯ ಗೆಳತಿಗೆ ವಿವರಿಸುತ್ತಾರೆ.

" ಗೆಳತಿ, ಕೇಳು ಕೇಳವ್ವಾ, ನಾನೊಂದು ಕನಸು ಕಂಡೆ. ಒಂದು ಎತ್ತರವಾದ ಬೆಟ್ಟ (ಕೈಲಾಸ) ಅಲ್ಲೊಬ್ಬ ಜಟಾಧಾರಿ ಕುಳಿತಿದ್ದ. ಅವನಿಗೆ ಚಿಕ್ಕ ಚಿಕ್ಕ ಜಡೆಗಳಿದ್ದವು. ಹಲ್ಲುಗಳು ಸುಂದರವಾಗಿದ್ದವು, ಹೊಳೆಯುತ್ತಿದ್ದವು. ನನ್ನನ್ನು ನೋಡುತ್ತಲೇ ಬಂದು ಅಪ್ಪಿಕೊಂಡನು. ನಾನು ಪುಳಕಿತಳಾದೆನು. ಈ ಅನುಭವದಿಂದ ರೋಮಾಂಚಿತಳಾದೆ.

35. ಭಿಕ್ಷಕ್ಕೆ ಬಂದ ಗೊರವ

ಅಕ್ಕ ಕೇಳೌ ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಓಲೆ ತೆಂಗಿನ ಕಾಯಿ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಅಕ್ಕ ಕೇಳವ್ವಾ; ನಾನೊಂದು ಕನಸ ಕಂಡೆ. ಶುಭ ಸೂಚಕಗಳಾದ ಅಕ್ಕಿ, ಅಡಕೆ, ಓಲೆಗರಿ, ತೆಂಗಿನ ಕಾಯಿ ಕಂಡೆ. ಏನೋ ಒಳ್ಳೆಯದು ಸಂಭವಿಸುತ್ತದೆ ಎಂದು ಸಂತೋಷದಿಂದ ಕಾಯುವಾಗಲೇ ಚಿಕ್ಕ ಚಿಕ್ಕ ಜಡೆಗಳ ಸಣ್ಣಕ್ಕಿಯಂತಹ ಹೊಳೆಯುವ ಹಲ್ಲುಗಳ ಗೊರವನು ಭಿಕ್ಷಕ್ಕೆ ಮನೆಗೆ ಬಂದುದ ಕಂಡೆ. ನನ್ನಿಂದ ತಪ್ಪಿಸಿಕೊಳ್ಳುವಂತೆ ಹೊರಟು ಹೋಗುತ್ತಿದ್ದ. ನಾನು ತಟ್ಟನೆ ಹೋಗಿ ಬೆಂಬತ್ತಿ ಕೈಹಿಡಿದುಬಿಟ್ಟೆ. ಆದರೆ ತಕ್ಷಣ ನನಗೆ ಎಚ್ಚರವಾಗಿಬಿಟ್ಟಿತು.

36. ಕೆಂಜೆಡೆಗಳ ಗೊರವ

ಅಕ್ಕ ಕೇಳಕ್ಕಾ ನಾನೊಂದು ಕನಸಾ ಕಂಡೆ

ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು
ಚನ್ನಮಲ್ಲಿಕಾರ್ಜುನನ ಕಂಡು
ಕಣ್ಣು ಮುಚ್ಚಿ ತೆರೆದು ತಳವೆಳಗಾದೆನು.

ಅಕ್ಕಾ ಕೇಳು; ನಾನೊಂದು ಕನಸನ್ನು ಕಂಡೆ. ಎಳೆಬಿಸಿಲಿನಲ್ಲಿ ಕೆಂಜೆಡೆಗಳು ಮಿರುಗುತ್ತಿದ್ದವು. ಆತ ಸುಲಿಪಲ್ಲಿನವನು. ಬಂದು ನನ್ನನ್ನು ಆಲಂಗಿಸಿದ. ಆತನನಪ್ಪಿಕೊಂಡು ಪುಳಕಿತಳಾದೆನು. ಶಿವನನ್ನು ಕಂಡು ಹರ್ಷದಿಂದ ಕಣ್ಣು ಮುಚ್ಚಿಕೊಂಡೆನು. ಕಣ್ಣು ತೆರೆದಾಗ ಪುಳಕಿತ ಅನುಭವವಾಗಿತ್ತು.

37. ತನ್ಮಯತೆಯ ಸರಸಿಯಲ್ಲಿ

ಹಗಲಿನ ಕೂಟಕ್ಕೆ ಹೋರಿ ಬೆಂಡಾದೆ;
ಇರುಳಿನ ಕೂಟದಲ್ಲಿ ಇಂಬರಿದು ಹತ್ತಿದೆ.
ಕನಸಿನಲ್ಲಿ ಮನಸಂಗವಾಗಿ ಮೈಮರೆದಿರ್ದೆ;
ಮನಸ್ಸಿನಲ್ಲಿ ಮೈಮರೆದು ಒರಗಿದೆ.
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನ
ಕಂಡು ಕಣ್ದೆರೆದೆ.

ಅಕ್ಕನವರು ಪರಮಾತ್ಮನ ಕೂಟದ ದಿವ್ಯಾನಂದವನ್ನು ಅನುಭವಿಸುತ್ತಿದ್ದಾರೆ. ಹಗಲೆಂದಿಲ್ಲ, ಇರುಳೆಂದಿಲ್ಲ ಸದಾಕಾಲ ಮಕರಂದವನ್ನು ಪಾನಮಾಡಿ ಮೈಮರೆದ ದುಂಬಿಯಂತಾಗಿದ್ದಾರೆ. ಹಗಲಿನಲ್ಲೂ ದೇವ ಸಾಮರಸ್ಯದ ಅನುಭವದಿಂದ ಜರ್ಜರಿತರಾಗಿದ್ದಾರೆ; ಇರುಳಿನಲ್ಲೂ ದೇವಸಂಗದಲ್ಲಿ ತನ್ಮಯರಾಗಿದ್ದಾರೆ. ಮಲಗಿ ನಿದ್ರಾವಶರಾದರೆ ಕನಸಿನಲ್ಲೂ ಅದೇ ಸಾಮರಸ್ಯ ಸಕ್ಕರೆಯ ಗೊಂಬೆಯು ಹಾಲಿನಲ್ಲಿ ಕರಗುವಂತೆ ಅಕ್ಕನವರ ಮನಸ್ಸು ಲಿಂಗಾನುಭವದಲ್ಲಿ ಕರಗಿದೆ. ಕಷ್ಟಪಟ್ಟು ಅದನ್ನು ಬಹಿರ್ಮುಖಗೊಳಿಸಬೇಕಿದೆ.

38. ಬೆಡಗಿನ ವಚನ

ತಲೆಯಲ್ಲಿ ನಿರಿ, ಟೊಂಕದಲ್ಲಿ ಮುಡಿ,
ಮೊಳಕಾಲಲ್ಲಿ ಕಿವಿಯೋಲೆಯ ಕಂಡೆ
ಹರವಸದ ಉಡಿಗೆ!
ಏಕಾಂತದಲ್ಲಿ ಮುಖವ ಕಂಡು ಕಾಣದೆ
ಚನ್ನಮಲ್ಲಿಕಾರ್ಜುನ ದೇವನು
ನೆರೆವ ಪರಿಕರ ಹೊಸತು.

ಇದು ದ್ವಂದ್ವಾರ್ಥದ ಬೆಡಗಿನ ವಚನ, ಅರ್ಥವಾಗುತ್ತಲಿಲ್ಲ.

39. ಸಗುಣ ಸಾಕ್ಷಾತ್ಕಾರ

ಕಂಗಳೊಳಗೆ ತೊಳಗಿ ಬೆಳಗುವ

ದಿವ್ಯರೂಪವ ಕಂಡು ಮೈಮರೆದೆನವ್ವಾ
ಮಣಿಮುಕುಟದ ಫಣಿಕಂಕಣದ ನಗೆಮೊಗದ
ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ
ಇಂತಾಗಿ ಚನ್ನಮಲ್ಲಿಕಾರ್ಜುನಯ್ಯಾ, ಮದುವಣಿಗ
ಆನು ಮದುವಣಿಗಿ ಕೇಳಾ ತಾಯೆ.

ಅಕ್ಕನವರಿಗೆ ಸಗುಣ ಸಾಕ್ಷಾತ್ಕಾರವಾಗಿದೆ. ಅಕ್ಕನವರ ಕಣ್ಣುಗಳನ್ನು, ಮೈಮನಗಳನ್ನು ತುಂಬಿಕೊಂಡ ದಿವ್ಯ ರೂಪನನ್ನು ಈಗ ಪ್ರತ್ಯಕ್ಷವಾಗಿ ನೋಡಿ ಮೈಮರೆಯುತ್ತಿದ್ದಾರೆ. ರುದ್ರಾಕ್ಷಿ ಮಣಿಯ ಕಿರೀಟ ಧರಿಸಿದ, ಹಾವುಗಳ ಕಂಕಣವನ್ನು ಕೈಗೆ ಸುತ್ತಿಕೊಂಡ ನಗೆ ಮೊಗದ ಶುಭ್ರ ಬಿಳಿಯ ಹಲ್ಲುಗಳ ಚೆಲುವನ ಕಂಡು ಮನಸೋತಿದ್ದಾರೆ. ಹೀಗಾಗಿ ಈತನೆ ತಮ್ಮನ್ನು ವರಿಸುವ ವರ, ತಾನು ಇವನ ಮದುವಣಿಗೆ ಎಂದು ನಿರ್ಧರಿಸಿ ತಾಯಿಗೆ ಹೇಳುತ್ತಿದ್ದಾರೆ.

ಅಧ್ಯಾತ್ಮಿಕ ಸಾಧನೆಯಲ್ಲಿ ಸಗುಣ ಸಾಕ್ಷಾತ್ಕಾರ ಒಂದು ಅಪರೂಪದ ಅನುಭವ. ಸಾಧಕನು ತಾನು ಆರಾಧಿಸುವ ರೂಪದಲ್ಲಿ ದೈವೀಶಕ್ತಿಯನ್ನು ಕಾಣುವನು. ನೀರಿಗೆ ಆಕಾರವಿಲ್ಲ. ಅದು ಆಶ್ರಯಿಸುವ ಪಾತ್ರೆಯ ಆಕಾರವನ್ನು ತಳೆಯುವುದು. ವಿದ್ಯುತ್ತಿಗೆ ಆಕಾರವಿಲ್ಲ. ಅದು ತಾನು ಹರಿಯುವ ಬಲ್ಬಿನ ಆಕಾರದಲ್ಲಿ ಗೋಚರಿಸುವುದು. ಹಾಗೆ ದೇವನಿಗೆ ಆಕಾರವಿಲ್ಲ. ಭಕ್ತನು ಆರಾಧಿಸುವ ರೂಪದಲ್ಲಿ ಗೋಚರವಾಗುವನು. ಅದೇ ಆಕಾರವೇ ದೇವರ ಆಕಾರವಲ್ಲ. Audio Visual form. ದೃಶ್ಯ-ಶ್ರಾವ್ಯ ಆಕಾರವಾಗಿ ದೈವೀಶಕ್ತಿಯು ಸಾಧಕನೊಡನೆ ಸ್ಪಂದಿಸುವುದು.

40. ದೇಹ ದೇವಾಲಯ

ಕೆರೆಯ ತಡಿಯಲೊಂದು ದೇಗುಲ
ದೇಗುಲದೊಳಗೊಂದು ದೇವರ ಕಂಡೆ ॥ ಪಲ್ಲವಿ ॥

ನೆತ್ತಿಯ ಮೇಲೊಂದು ಅಮೃತದ ಕೊಡನು
ಎತ್ತಿ ರುದ್ರಗೆ ಅಭಿಷೇಕವ ಮಾಡಿ
ಮುತ್ತಿನ ಕಂಭದೊಳೆತ್ತಿದ ದೀವಿಗೆ
ಚಿತ್ತದಾರತಿಯನು ಬೆಳಗಿದಳವ್ವೆ ॥ 1 ॥

ಸಾಸಿರ ಕಮಲದ ಎಸಳಿನ ಪೂಜೆಯ
ಬೀಸರ ಹೋಗದೆ ಮಾಡಿದಳವ್ವೆ
ಲೇಸ ಬಯಸಿ ವಿಭೂತಿಯ ಧರಿಸಿದ
ಮೀಸಲ ಗಂಧವನಿಟ್ಟಳೆಮ್ಮವ್ವೆ ॥ 2 ॥

ತನ್ನ ಮನೆಯೊಳುಳ್ಳ ಅಮೃತದ ಬೋನವ
ಭಿನ್ನ ಭಾವವಳಿದ ಹರಿವಾಣದೊಳಗೆ
ಚನ್ನಮಲ್ಲಿಕಾರ್ಜುನ (ಲಿಂಗದೇವ)ನಿಗೆ ಸಲ್ಲಲಿ ಎಂದು
ಓಂ ನಮಃ ಶಿವಾಯ ಎಂದು ಭಜಿಸಿದಳವ್ವೆ ॥ 3 ॥

ಸಂಸಾರ ಎಂಬ ಕೆರೆಯ ದಂಡೆಯ ಮೇಲೆ ದೇಹವೆಂಬ ಒಂದು ದೇಗುಲ; ದೇಹವೆಂಬ ದೇಗುಲದೊಳಗೆ ಪರಮಾತ್ಮನ ಒಂದು ಅಂಶವಾದ ಆತ್ಮನನ್ನು ಕಂಡೆ.

ನೆತ್ತಿಯ ಮೇಲೆ ಎಂದರೆ ಆಜ್ಞಾಚಕ್ರದ ಮೇಲೆ, ಸಹಸ್ರಾರದ ಒಳಗೆ ಇರುವ ಚಿದಾಕಾಶವೇ ಅಮೃತದ ಕೊಡ. ಅದರಿಂದ ಸುರಿಯುವ ಅಮೃತದಿಂದಲೇ ರುದ್ರಗೆ (ಆತ್ಮ ಚೇತನಕ್ಕೆ) ಅಭಿಷೇಕ. ಮುತ್ತಿನ ಕಂಭವೆಂದರೆ ಸುಷುಮ್ನಾನಾಡಿ (ಕಶೇರುಕರಜ್ಜು) ಅದರ ತುದಿಯಲ್ಲಿ ಜ್ಯೋತಿರ್ಬಿಂದುವಿನ ದೀವಿಗೆ. ಮನಸ್ಸು ಚಿತ್ತವನ್ನೇ ಆರತಿಯನ್ನಾಗಿ ಮಾಡಿಕೊಂಡು ಜ್ಯೋತಿಯನ್ನು ಬೆಳಗುತ್ತಿದೆ.

ಸಹಸ್ರಾರು ಚಕ್ರವೇ ಸಾಸಿರದಳದ ಕಮಲ. ಅದರಿಂದ ಮಹಾಲಿಂಗಕ್ಕೆ ಪೂಜೆ. ಎಲ್ಲರಿಗೂ ಒಳ್ಳಿತನ್ನೇ ಬಯಸುವ ವಿಭೂತಿಯನ್ನು ಇಟ್ಟು, ಜೀವನವನ್ನೇ ಮೀಸಲಿಟ್ಟ ಗಂಧವನ್ನು ಭಕ್ತಿ ಎಂಬ ವನಿತೆ ಇಟ್ಟಳು.

ದಿವ್ಯಾನಂದ ಎಂಬ ಅಮೃತದ ಬೋನ ಹೊರಗಲ್ಲೂ ಇರದೆ ತನ್ನೊಳಗೇ ಇದೆ ಎಂದರಿತು ಏಕೋಭಾವ ಎಂಬ ತಟ್ಟೆಯೊಳಗೆ ಚನ್ನಮಲ್ಲಿಕಾರ್ಜುನನಿಗೆ ಸಲ್ಲಲಿ ಎಂದು ಭಕ್ತಿ ಎಂಬ ಶರಣ ಸತಿಯು "ಓಂ ನಮಃ ಶಿವಾಯ" ಎಂದು ಭಜಿಸಿದಳು.

41. ಶರೀರ ಎಂಬ ಪಟ್ಟಣದ ವಿಶೇಷ

ಸಪ್ತಧಾತುಗಳಿಂದ ಬಳಸಲ್ಪಟ್ಟ ಈ ಶರೀರವೆ
ಶಿವನ ಪಟ್ಟಣವೆಂದು ಹೇಳಲ್ಪಟ್ಟಿತು.
ಈ ಪಿಂಡವೆಂಬ ಪಟ್ಟಣದಲ್ಲಿ
ಸೂಕ್ಷ್ಮವಾದಂಥ ಧಾರಾಕಾಶದಿಂದ ಮನೋಹರವಾಗಿದ್ದ
ಹೃದಯಕಮಲವೆ ಅಂತಃಪುರವು
ಅಲ್ಲಿ ನಿತ್ಯಪರಿಪೂರ್ಣತ್ವದಿಂದ ಸಿದ್ಧನಾಗಿ ಸಚ್ಚಿದಾನಂದವೇ
ಕುರುಹಾಗುಳ್ಳ ಪರಶಿವನು ಜಲದಲ್ಲಿ ತೋರುತಿರ್ದ
ಆಕಾಶದೋಪಾದಿಯಲ್ಲಿ ಪ್ರತ್ಯಕ್ಷವಾಗಿ
ಪ್ರಕಾಶವೇ ಸ್ವರೂಪವಾಗುಳ್ಳಾತನಾಗಿ ಇರುತಿರ್ದನು
ಆ ಜಲಮಧ್ಯದಲ್ಲಿಯ ಆಕಾಶ ಬಿಂಬದಲ್ಲಿರುತಿರ್ದ
ಘಟಾಕಾಶದೋಪಾದಿಯಲ್ಲಿ
ಅಖಂಡಿತನಾಗಿರ್ದು ಚಿದ್ರೂಪನಾದ ಶಿವನನು
ಭಾವಿಸುವುದಯ್ಯ ಶ್ರೀ ಚನ್ನಮಲ್ಲಿಕಾರ್ಜುನದೇವಾ. (ಲಿಂಗದೇವ)

ಸಪ್ತಧಾತುಗಳಿಂದ ಬಳಸಲ್ಪಟ್ಟ ಈ ಶರೀರವೆ ದೇವರು ನಿರ್ಮಾಣ ಮಾಡಿರುವ ಪಟ್ಟಣ ಸಪ್ತಧಾತುಗಳು ಯಾವುವೆಂದರೆ, ರಸ, ರುಧಿರ, ಮಾಂಸ, ಮೇಧಸ್, ಅಸ್ಥಿ, ಮಜ್ಜೆ, ಶುಕ್ಲ ಈ ಏಳು ಧಾತುಗಳಿಂದಲೇ ಶರೀರವು ರೂಪುಗೊಂಡಿರುವುದು. ಈ ಶರೀರ ಎಂಬ ಪಟ್ಟಣದಲ್ಲಿ ಸೂಕ್ಷ್ಮವಾದಂತಹ ಹೃದಯ ಕಮಲವೇ ಅಂತಃಪುರವು. ನಿತ್ಯನು, ಪರಿಪೂರ್ಣನೂ ಆದ ಸಚ್ಚಿದಾನಂದ ಸ್ವರೂಪಿಯಾದ ಪರಶಿವನು ನೀರಿನಲ್ಲಿ ಪ್ರತಿಫಲನಗೊಳ್ಳುವ ಆಕಾಶದಂತೆ ಜೀವಾತ್ಮನಾಗಿ ಇರುತ್ತಿರುವನು. ಘಟದಲ್ಲಿರುವ ಆಕಾಶದ ಹಾಗೆ ಜೀವಾತ್ಮನು, ಹೊರಗಡೆ

ಇರುವ ಆಕಾಶದ ಹಾಗೆ ಪರಮಾತ್ಮನು ಇರುತಿರುವರು. ಈ ರೀತಿಯಾಗಿ ಜೀವಾತ್ಮ-ಪರಮಾತ್ಮರನ್ನು ಭಾವಿಸಬೇಕು.

42. ಗುರೂಪದೇಶದ ಆವಶ್ಯಕತೆ

ಅಗ್ನಿ ಸರ್ವವ್ಯಾಪಕನಾಗಿರುವಂತೆ,
ಚಿದ್ವಹ್ನಿರೂಪನಾದ ಶಿವನು ಸರ್ವವ್ಯಾಪಕನಾಗಿರ್ಪನು
ಹೃದಯಕಮಲವು ಮುಕುರದೋಪಾದಿಯಲ್ಲಿ ಪ್ರಕಾಶಿಸುತಿರ್ದಪುದು
ಆ ಕನ್ನಡಿಯೋಪಾದಿಯ ಹೃದಯಕಮಲದಲ್ಲಿ
ವ್ಯಾಪಕನಾದ ಶಿವನು,
ಆತ್ಮನೆನಿಸಿಕೊಂಡು ಪ್ರತಿಬಿಂಬಿಸುತಿರ್ದಪನು
ವೇದೋಪನಿಷದ್ಗಾಯಿತ್ರಿ ಪ್ರಸಿದ್ಧವಾದೀ ರಹಸ್ಯವ
ಗುರೂಪದೇಶದಿಂ ತಿಳಿವುದಯ್ಯಾ
ಶ್ರೀ ಚನ್ನಮಲ್ಲಿಕಾರ್ಜುನ (ಲಿಂಗದೇವ) ದೇವಾ.

ಬೆಂಕಿಯು ಸರ್ವವ್ಯಾಪಕವಾಗಿರುವಂತೆ ದೇವರು ಚಿದಗ್ನಿ ಸ್ವರೂಪನಾಗಿ ಎಲ್ಲೆಡೆಯಲ್ಲಿ ಇರುವನು. ಹೃದಯ ಕಮಲವು ಕನ್ನಡಿಯೋಪಾದಿಯಲ್ಲಿ ಪ್ರಕಾಶಿಸುತ್ತಿರುವುದು. ಸರ್ವವ್ಯಾಪಿಯಾದ ದೇವನು ಹೃದಯದ ಕನ್ನಡಿಯಲ್ಲಿ ಪ್ರತಿಬಿಂಬಿತನಾಗಿ ಆತ್ಮ ಎನ್ನಿಸಿಕೊಳ್ಳುವನು. ವೇದ ಉಪನಿಷತ್ ಗಾಯತ್ರಿ ಎಲ್ಲವುಗಳಲ್ಲಿಯೂ ಪ್ರಸಿದ್ಧವಾದ ಈ ತತ್ವವನ್ನು ಗುರುವಿನ ಉಪದೇಶದಿಂದ ಮಾತ್ರ ತಿಳಿಯಲು ಸಾಧ್ಯ.

43. ಲಿಂಗದೇವನ ಹಂಬಲ

ಲಿಂಗದೊಳು ಮೆಚ್ಚಿ ಮನ। ಹಿಂಗದಿಹ ಭಾವಸುಖ।
ಸಂಗವಾರಿಗಹುದೋ? ॥ ಪಲ್ಲವಿ ॥

ಎಡೆಗೊಂಡ ಸ್ನೇಹದೊಳು। ಬಿಡಲಾರದಿಹ ಮೋಹ।
ವಡರಿರ್ದ ರಮಣ ರತಿಸುಖಕೆಳೆಸುತ ॥
ಬಿಡದೆ ಕಡು ತವಕದಲ್ಲಿ । ಒಡಗೂಡಿ ಲಿಂಗದಲಿ।
ಎಡೆವರಿಯದಿಹ ಬೆಡಗದೆಂದಿಗಿಹುದೋ॥ ॥ 1 ॥

ಅಗಲಿದಡೆ ತನುಕರಣ। ದಿಗಿಲೆಂದು ಬಗೆಗುಂದಿ
ಮಿಗೆ ಕಂದಿ ಲಿಂಗವನೊಡಗೂಡುತ್ತ॥
ಝುಗಝುಗಿಸುತಿಹ ಬೆಳಗಿನೊಳು ನಿಂದು ಮನ ಮಗ್ನ।
ಅಗಲಲಾರದೆ ಇರುವುದೆಂದಿಗಹುದೋ॥ ॥ 2 ॥
ದಿವರಾತ್ರಿಯೆನ್ನದೆವೆ ಹಳಚದಿಹ ನಟ್ಟಾಲಿ
ಶಿವಲಿಂಗದೊಳಗೆ ನಿಂದಾನಂದವ॥
ಸವಿಸವಿದು ನಿಷ್ಠೆ ಪರವಶವಾಗಿ ಎಚ್ಚರದ।
ಅವಿರಳಾನಂದದಿರವೆಂದಿಗಹುದೋ॥ ॥ 3 ॥

ಸಂಚಲಿಸುತಿಹ ಮನ ಪ್ರಪಂಚುಗಳನತಿಗಳೆದು

ಚಿಂತೆ ನಿಶ್ಚಿಂತೆ ಎಂಬುಭಯವಳಿದು॥
ಮಿಂಚು ತ್ರಿಜಗವನಂಗವಿಸಿ ತೋರಿ ನಿಂದಂತೆ।
ಪಂಚಾನನನ ಕರುಣವೆಂದಿಗಹುದೋ॥ ॥ 4 ॥

ಘನಮಹಾಲಿಂಗದೊಳು ನೆನಹಳಿದು ಮನಕೂಡೆ
ಅನುವರೆದು ತನುಕರಣ ಹೃದಯದೊಳಗೆ
ಘನಗುರು ಚನ್ನಮಲ್ಲೇಶ ನಿಮ್ಮೊಳಗೊಂದಿ।
ಅನುದಿನವು ಬಿಡದೆ ಬೆರೆಸುವೆನೆಂದಿಗೆ॥ ॥ 5 ॥

ಮೊದಲು ಲಿಂಗದೇವನ ಅಸ್ತಿತ್ವದಲ್ಲಿ ನಂಬಿಕೆ ಇಡಬೇಕು; ಶ್ರದ್ಧೆಯಿಂದ ಶರಣಾಗಬೇಕು. ಅವನ ಅನುಗ್ರಹ ಮತ್ತು ಅನುಭವಕ್ಕಾಗಿ ಹಂಬಲಿಸಬೇಕು. 'ಭಾವ' ಒಂದು ಅಂತರಿಂದ್ರಿಯ ದೇವನೊಡನೆ ನೇರ ಸಂಪರ್ಕ ಸಾಧಿಸುವುದು ಇದೆ. ಭಾವಸುಖ ಸಂಗವು ಯಾರಿಗೆ ಸಾಧ್ಯವಾಗುವುದೋ ಅವರು ಪುಣ್ಯವಂತರು.

ಲಿಂಗಪತಿಯೊಡನೆ ಎಡೆಗೊಂಡ ಸ್ನೇಹದಿಂದಾಗಿ ಬಿಡಲಾರದಿಹ ಮೋಹ ಅಳವಡುವುದು. ಪ್ರಾಣವು ದೇವನೊಡನೆ ಸಾಮರಸ್ಯ ಸಾಧಿಸುವುದು. ಲಿಂಗದಲಿ ಒಡಗೂಡುವ ಬೆಡಗು ಎಂದಿಗೆ ಸಾಧ್ಯವಾಗುವುದೋ? ॥ 1 ॥

ಕೊಂಚಕಾಲ ಲಿಂಗದೇವನ ನೆನಹನ್ನು ಅಗಲಿದಡೆ ಶರೀರ, ಇಂದ್ರಿಯಗಳು ನಿಸ್ಸತ್ವಗೊಂಡು, ಕುಂದಿ ಕಂದಿ ಲಿಂಗವನೊಡಗೂಡುತ್ತ! ಝುಗಝುಗಿಸುತಿಹ ಬೆಳಗಿನೊಳು ನಿಂದು, ಮನವು ಮಗ್ನವಾಗಿ, ಅಗಲಲಾರದಂತೆ ದೇವನ ನೆನಹಿನಲ್ಲಿ ಇರುವುದು ಎಂದಿಗೆ ಸಾಧ್ಯವಾಗುವುದೊ?

ಹಗಲುರಾತ್ರಿ ಎನ್ನದೆ ಕಣ್ಣಿನರೆಪ್ಪೆ ಬಡಿಯದಂತೆ ಆಲಿ ನೆಟ್ಟು ಲಿಂಗದೇವನೊಳಗೆ ನಿಂದು, ಆನಂದವ ಸವಿಸವಿದು, ನಿಷ್ಠೆ ಪರವಶವಾಗಿ ಎಚ್ಚರದ ಅವಿರಳಾನಂದದ ಇರುವು ಎಂದಿಗೆ ಸಾಧ್ಯವಾಗುವುದೊ?

ಚಂಚಲವಾಗಿ ಹರಿಯುವ ಮನಸ್ಸು, ಪ್ರಪಂಚುಗಳನ್ನು ತಿರಸ್ಕರಿಸಿ
ಚಿಂತೆ, ನಿಶ್ಚಿಂತೆ ಎಂಬ ಉಭಯ ಭಾವವಳಿದು
ಮಿಂಚು ಮೂರುಲೋಕಗಳನ್ನೂ ವ್ಯಾಪಿಸಿ ನಿಂತಂತೆ
ಪಂಚಮುಖ ಉಳ್ಳವನ ಅನುಗ್ರಹ ಎಂದಿಗೆ ಸಾಧ್ಯವಾಗುವುದೊ?
ಮಹಾಲಿಂಗದೇವನಲ್ಲಿ ನೆನಹು ನಿಂದು, ಮನಸ್ಸು ಕೂಡಿ
ಶರೀರ, ಇಂದ್ರಿಯ, ಹೃದಯದೊಳಗೆಲ್ಲ ವ್ಯಾಪಿಸಿ
ಘನಗುರು ಚೆನ್ನಮಲ್ಲೇಶ ನಿಮ್ಮೊಳಗೊಂದಿ
ಅನುದಿನವು ಬಿಡದೆ ಬೆರೆಸುವುದು ಎನಗೆಂದು ಸಾಧ್ಯವಾಗುವುದೊ?

44. ದೇವ ವಿರಹ

ಅಯ್ಯಾ, ನೀನು ದಂಡು ಮಂಡಲಕ್ಕೆ ಹೋದಹೆನೆಂದಡೆ
ನಾನು ಸುಮ್ಮನಿಹೆನಲ್ಲದೆ,
ನೀನೆನ್ನ ಕೈಯೊಳಗಿದ್ದು, ನೀನೆನ್ನ ಮನದೊಳಗಿದ್ದು
ಎನ್ನ ಕೂಡದಿದ್ದಡೆ ನಾನೆಂತು ಸೈರಿಸುವೆನಯ್ಯಾ?

ನೆನಹೆಂಬ ಕುಂಟಣಿ ಚನ್ನಮಲ್ಲಿಕಾರ್ಜುನನ
ನೆರಹದಿದ್ದಡೆ ನಾನೇವೆ ಸಖಿಯೆ?

ಅಯ್ಯಾ, ನೀನು ಸೈನ್ಯವನ್ನು ಸೇರಿ ಯುದ್ಧಭೂಮಿಗೆ ಹೋಗಿರುವೆ ಎಂದರೆ ಹೇಗಾದರೂ ಸುಮ್ಮನೆ ಇರಬಹುದು. ಹಾಗಾಗದೆ ನೀನು ಎನ್ನ ಕೈಯೊಳಗೆ ಇಷ್ಟಲಿಂಗವಾಗಿ ಇದ್ದು, ನನ್ನ ಮನಸ್ಸಿನಲ್ಲೇ ನೆಲೆಸಿದ್ದು ನನ್ನೊಡನೆ ಪ್ರತಿಕ್ರಿಯಿಸದಿದ್ದರೆ ನಾನು ಹೇಗೆ ಸೈರಿಸಲು ಸಾಧ್ಯ? ನೆನಹು(meditation) ಎಂಬ ಪರಿಚಾರಕಿ (ಮಧ್ಯವರ್ತಿ) ಚನ್ನಮಲ್ಲಿಕಾರ್ಜುನನನ್ನು ಕೂಡಿಸದೆ ಇದ್ದರೆ ಗೆಳತಿ ನಾನೇನು ಮಾಡಲು ಸಾಧ್ಯ?

45. ಲಿಂಗವಿಕಳಾವಸ್ಥೆ

ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು
ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು
ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿಪ್ಪೆನು
ಚನ್ನಮಲ್ಲಿಕಾರ್ಜುನಯ್ಯಾ.
ನಿಮ್ಮ ಒಲುಮೆನಟ್ಟು ಹಸಿವು ತೃಷೆ ನಿದ್ರೆಯ ತೊರೆದೆನಯ್ಯಾ.

ಭಾರತೀಯರ ಪ್ರಕಾರ ಹಗಲಿನಲ್ಲಿ ನಾಲ್ಕು ಜಾವ, ರಾತ್ರಿಯಲ್ಲಿ ನಾಲ್ಕು ಜಾವ. 3 ತಾಸಿಗೆ ಒಂದು ಜಾವ. ಬೆಳಗಿನ ಆರರಿಂದ ಸಂಜೆ 6ರವರೆಗೆ ಹಗಲು, ಸಂಜೆ 6 ರಿಂದ ಬೆಳಗಿನ 6 ರವರೆಗೆ ಇರುಳು. ಅಕ್ಕನವರು ಹಗಲು ನಾಲ್ಕು ಜಾವವೂ ದೇವನ ವಿರಹದಲ್ಲಿರುವರು; ಇರುಳು ನಾಲ್ಕು ಜಾವವೂ ದೇವ ಹಂಬಲದಲ್ಲಿರುವರು. ಹೀಗೆ ಹಗಲು-ಇರುಳು ದೇವರ ಹಂಬಲದಲ್ಲಿ ಮೈಮರೆದು ಒರಗಿಕೊಂಡಿರುವರು. ಪರಮಾತ್ಮನ ಒಲುವೆ ನಟ್ಟು ಹಸಿವು, ತೃಷೆ, ನಿದ್ರೆ ಇವುಗಳನ್ನು ಮರೆತಿದ್ದಾರೆ.

ಅಕ್ಕನ ಯೋಗಾಂಗ ತ್ರಿವಿಧಿ

ಭಾಗ -3

ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

---

7. ಮಾಘ ಮಾಸವು ಪೋಗಿ ಮೇಗೆ ಬಂದಿತು ಚೈತ್ರ
ಬೇಗ ಮಾಮರನು ತಳಿರೇರೆ। ಅದ ಕಂಡು
ಕೂಗಿ ಕರೆಯಿತ್ತು ಕಳಕಂಠ ॥

ಭಾವಾರ್ಥ: ಮಾಘ ಮಾಸದಲ್ಲಿ ಗಿಡ ಮರಗಳೆಲ್ಲಾ ಒಣಗಿ ಬರಡಾಗಿರುತ್ತವೆ. ಆ ಸಮಯದಲ್ಲಿ ಕೋಗಿಲೆಯು ಮೌನವಾಗಿರುತ್ತದೆ. ನಂತರ ಚೈತ್ರ ಮಾಸವು ಬಂದಾಗ ಗಿಡ ಮರಗಳು ಚಿಗುರೊಡೆದು ಸುಂದರವಾಗಿ ಕಾಣತೊಡಗುವವು. ಆ ಸಮಯದಲ್ಲಿ ಮಾವಿನ ಮರದ ಚಿಗುರನ್ನು ತಿಂದಾಗ ಕೋಗಿಲೆಯ ಕಂಠ ಮಧುರವಾಗಿ ಕುಹೂ.. ಕುಹೂ.. ಎಂದು ಸಂತೋಷ ದಿಂದ ಹಾಡತೊಡಗುವುದು. ಯಾರನ್ನು ಕುರಿತು ಹಾಡುವುದು ಎಂದರೆ ತನ್ನ ಪ್ರಿಯತಮೆಗಾಗಿ ಇದರಂತೆಯೆ ಜೀವಾತ್ಮನು ಅಜ್ಞಾನದಿಂದ ಮಾಯೆಯ ಮರೆವೆಯಿಂದ ಭವಬಂಧನದಲ್ಲಿ ಸಿಲುಕಿಕೊಂಡಿರುತ್ತಾನೆ. ಹಿಂದಿನ ಜನ್ಮದ ಸಂಸ್ಕಾರದಿಂದ ನಿಷ್ಕಾಮಕರ್ಮದ ಫಲದಿಂದ ಸದ್ಗುರುವಿನ ದರ್ಶನವಾಗಿ ದೀಕ್ಷೆಯನ್ನು ಹೊಂದಿದಾಗ ನಾನು ಯಾರು ಎಲ್ಲಿಂದ ಬಂದೆ ಈ ದೇಹ ಬಂದ ಪರಿ ಯಾವುದು ಇನ್ನು ಮುಂದೆ ಹೊಂದುವ ಗತಿಯಾವುದೆಂದು ಸುಜ್ಞಾನ ತಲೆದೋರಿದಾಗ ಸಾಧನೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಚಿತ್ತ ಚಾಂಚಲ್ಯತೆಯನ್ನು ಕಳೆದುಕೊಂಡು ಏಕಾಗ್ರತೆ ಸಾಧಿಸಿ ಅಂತರಂಗವನ್ನು ಪರಿಶುದ್ಧಗೊಳಿಸಿ ತನ್ನ ಹೃದಯಕಮಲದಲ್ಲಿ ಶರಣ ಸತಿಯು ಲಿಂಗಪತಿಯ ಬರವಿಗಾಗಿ ಹಂಬಲಿಸುವ ರೀತಿಯನ್ನು ಚನ್ನಸತಿ ಅಕ್ಕಮಹಾದೇವಿಯವರು ಉಸುರಿದ್ದಾರೆ.

8. ಆಕಾಶದೊಳಗಣ ಜ್ಯೋತಿಯ ಪ್ರಭೆ ಬಂದು
ಲೋಕಂಗಳೊಳಗೆ ಮುಸುಕಲು। ಅದಕಂಡು
ಏಕಾಂಗಿಯಾದಡವ ಯೋಗಿ ॥

ಭಾವಾರ್ಥ: ಆಕಾಶದೊಳಗಣ ಸೂರ್ಯನುದಯಿಸಲು ಎಲ್ಲ ಲೋಕಂಗಳಲ್ಲಿ ಪ್ರಕಾಶವು ಹರಡಿ, ಪಸರಿಸಿ ವಿಶ್ವದ ಎಲ್ಲ ಜೀವ ರಾಶಿಗಳ ಹಾಗೂ ಸಸ್ಯರಾಶಿ, ಗಿಡ ಮರ ಹೂಬಳ್ಳಿಗಳಲ್ಲಿ ಚೈತನ್ಯ ಪಸರಿಸುವುದು. ಅದೇ ರೀತಿ ಇಲ್ಲಿ ಅಕ್ಕಮಹಾದೇವಿಯವರು ಬ್ರಹ್ಮರಂಧ್ರದಲ್ಲಿರುವ ಸಹಸ್ರಾರು ಚಕ್ರದಲ್ಲಿ ದಿವ್ಯವಾದ ಬೆಳಗು ಪ್ರಕಟವಾಗಿ ದೇಹದ ಎಲ್ಲ ಭಾಗಗಳಲ್ಲಿ ಬೆಳಕು ಪ್ರಕಾಶಿಸಲು ಅಜ್ಞಾನ ಕತ್ತಲೆ ಮಾಯವಾಗಿ ಪರಿಶುದ್ಧವಾಗಿ ಜ್ಞಾನದ ಬೆಳಗಿನಲ್ಲಿ ಒಡವೆರೆದು ಒಂದಾದ ಜೀವಾತ್ಮ ತಾನೆ ಪರಮಾತ್ಮ ವಾಗುವುದು. ಇದೇ ಮುಕ್ತ ಸ್ಥಿತಿ. ಆತನೇ ದಿವ್ಯಯೋಗಿ ನಿಜಯೋಗಿ.

ನನ್ನ ಚಿದಾಕಾಶದೊಳಗೆ ತುಂಬಿರುವ ಜ್ಯೋತಿಯು ಅಂತರಂಗ-ಬಹಿರಂಗಗಳಲ್ಲಿ ಓತಪ್ರೋತವಾಗಿ ಹರಿದು ಲೋಕವನ್ನೆಲ್ಲಾ ಮುಸುಕಿದಂತಾಯಿತು. ಅದರಲ್ಲಿ ನಾನು ಏಕಾಂಗಿ ಯಾಗಿ ಆನಂದಿಸಿದೆ. ಅತ್ಯುನ್ನತ ಸ್ಥಿತಿಯೊಳಗೆ ಆಕಾಶದ ಒಳ-ಹೊರಗೆಲ್ಲ ಪರಂಜ್ಯೋತಿಯ ಪ್ರಭೆ ತುಂಬಿದಂತೆ ಅದರೊಳಗೆ ತಾನಿದ್ದಂತೆ ಸಾಧಕನಿಗೆ ಅನುಭೂತಿಯಾಗುತ್ತದೆ.

9. ಒಂಭತ್ತುವೆಜ್ಜದ ತುಂಬಿದ ಕೊಡನೊಳಗೆ
ಸಂಭ್ರಮದ ಮುತ್ತು ಇರುತಿಹುದು। ಅದರನುವ

ನಂಬಿ ಕಂಡವನೆ ಕಡುಜಾಣ ॥

ಭಾವಾರ್ಥ: ಒಂಭತ್ತು ರಂಧ್ರಗಳಿಂದೊಡಗೂಡಿದ ಈ ದೇಹದಲ್ಲಿ ಒಳ್ಳೆಯದೂ ಇದೆ. ಕೆಟ್ಟದೂ ಇದೆ. "ಅಮೇಧ್ಯದ ಮಡಿಕೆ, ಮೂತ್ರದಾ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ. ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಅಂತಃಕರಣಗಳು, ಅರಿಷಡ್ವರ್ಗ ವೈರಿಗಳು, ಸಪ್ತ ವ್ಯಸನಗಳು, ಅಷ್ಟಮದಗಳು ಇವೆಲ್ಲವುಗಳ ಮಧ್ಯದಲ್ಲಿ ತೋರದೇ ನಿರಾಕಾರ, ನಿರ್ಗುಣ, ನಿರಂಜನ ಪರಂಜ್ಯೋತಿ ಸ್ವರೂಪವಾದ ಆತ್ಮ ತತ್ವವಿದೆ, ದಿವ್ಯ ಮೌಕ್ತಿಕವಿದೆ ಅಥವಾ ಚಿಚ್ಛಕ್ತಿಯಿದೆ, ಇರುವಿಕೆಯ ಮರ್ಮವನ್ನು ಅರಿತವನೇ ನಿಜವಾದ ಜಾಣ. ಇದನ್ನು ತೋರಿಕೊಡುವುದು ಲಿಂಗಾಂಗಯೋಗದ ಧ್ಯೇಯ. ಇದನ್ನು ಅರಿಯಲು ಸಹಾಯಕವಾಗಲೆಂದು ಇಷ್ಟಲಿಂಗವನ್ನು ಎಡ ಅಂಗೈಯಲ್ಲಿ ಇಟ್ಟುಕೊಂಡು ಅರೆತೆರೆದ (ಅನಿಮಿಷ) ದೃಷ್ಟಿಯಿಂದ ತಾಟ್ರಕಯೋಗ ಮಾಡುತ್ತ ಹೋದಾಗ ಕೆಲವು ವಿಶೇಷ ಅನುಭವಗಳು ಆಗುತ್ತವೆ. ಈ ಅನುಭವವನ್ನು ಪಡೆದವನೇ ಜಾಣನು.

ಲೋಹ, ಮಣ್ಣಿನಿಂದಾದ ಭೌತಿಕ ಕೊಡವನ್ನು ಮಾನವ ದೇಹದ ಹೋಲಿಕೆಯೊಂದಿಗೆ ಆತ್ಮ ಸಹಿತ ಪಂಚಭೂತಗಳ ಸತ್ವಗಳ ಹೊದಿಕೆಯೊಂದಿಗೆ ಆದ ಮಾನವ ದೇಹವೆಂಬ ಘಟದ ವಿವರಣೆ ಕೊಡುತ್ತಿದ್ದಾರೆ ಅಕ್ಕಮಹಾದೇವಿಯವರು. ಮಣ್ಣು ಲೋಹದಿಂದಾದ ಕೊಡ ತೂತು ಹೊಂದಿದರೆ ಅದರಲ್ಲಿ ನೀರು ನಿಲ್ಲಲು ಅಸಾಧ್ಯ ಆದರೆ ಮೂಲತಃ ತೂತುಗಳನ್ನು ಹೊಂದಿಯೇ ಸಿದ್ಧವಾದ ಈ ದೇಹ ಕೂಡ ಸಮಯಕ್ಕನುಸಾರ ಮಾತ್ರ ಸೋರುತ್ತದೆ ಮತ್ತು ತುಂಬಿಕೊಂಡಿರುತ್ತದೆ. ಇದು ಒಂದು ವಿಚಿತ್ರವಾದ ಪವಿತ್ರಕೊಡ. ಆಟ-ಕ್ರಿಯೆ ನಿಂತರೆ ಈ ಕೊಡದಲ್ಲಿ (ದೇಹ) ಹೊರಗಿನಿಂದ ತುಂಬಲು ಅಸಾಧ್ಯ. ಅಲ್ಲದೆ ಅದರಲ್ಲಿದ್ದುದು ಮಣ್ಣಿನಲ್ಲಿ ಮಣ್ಣು, ನೀರಿನಲ್ಲಿ ನೀರು, ಬಯಲಲ್ಲಿ ಬಯಲಾಗಿ ಕಾಣದಾಗುವುದು. ಇಂಥ ಈ ದೇಹದ ಕೊಡವನ್ನು ಸರಿಯಾಗಿ ಉಪಯೋಗಿಸಿಕೊಳ್ಳಿ. ಇದರಲ್ಲಿ ಅನರ್ಘ್ಯ ರತ್ನವಿದೆ. ಅದನ್ನು ಜ್ಞಾನದೃಷ್ಟಿಯಿಂದ ದರ್ಶಿಸಿ ಅನುಭವಿಸಿ ಆನಂದ ಹೊಂದಿರಿ. ಈ ದೇಹದಲ್ಲಿಯೇ ಬೆಳಕಿನ -ಪ್ರಕಾಶದ ಅನರ್ಘ್ಯ ರತ್ನ ಮುತ್ತು ಇದೆ. ಎಂದು ಅರಿವಿನಾಳದೊಂದಿಗೆ ಅರಿತು ಆಚರಣೆಯಲ್ಲಿ ತಂದವನೇ ಕಡುಜಾಣ ಎಂದಿದ್ದಾರೆ ಮಹಾನುಭಾವಿ ಅಕ್ಕಮಹಾದೇವಿ.

10. ಅಷ್ಟದಳ ಕಮಲದ ಬಟ್ಟ ಬಯಲೊಳಗೊಂದು
ಮುಟ್ಟಬಾರದ ಘನವಿಹುದು। ಅದರೊಳಗೆ
ದೃಷ್ಟಿ ಇಟ್ಟವನೇ ನಿಜಮುಕ್ತ ॥

ಭಾವಾರ್ಥ: ಬಯಲೊಳಗೆ ಎಲ್ಲವೂ ಇದೆ. ಎಲ್ಲದರಲ್ಲಿಯೂ ಬಯಲು ಅಡಕವಾಗಿದೆ. ಈ ಅಡಕವಾದ ಶಾಂತ ಸ್ಥಿತಿಯೇ ಶಿವದೇವ. ಈ ಶಿವ-ದೇವನನ್ನು ಅರಿಯಲು ಮಾರ್ಗದರ್ಶನ ಮಾಡಿದ್ದಾರೆ ಅಕ್ಕಮಹಾದೇವಿಯವರು.

ಈ ತ್ರಿವಿಧಿಯಲ್ಲಿ ಮಾನವ ದೇಹದಲ್ಲಿ ನರಮಂಡಲದ ಕೆಲವು ಸ್ಥಾನಗಳನ್ನು ಚಕ್ರಗಳನ್ನಾಗಿ ಕಂಡು ವಿವರಿಸಿದ್ದಾರೆ. ಮೂಲಾಧಾರದಿಂದ ಮೆದುಳಿನ ಮೇಲ್ಭಾಗದವರೆಗೂ ಚಕ್ರಗಳನ್ನು ಹೆಸರಿಸಿದ್ದಾರೆ. ಮಧ್ಯದಲ್ಲಿ ಅದರ ಬಯಲೊಳಗೆ ಅಂದರೆ ಚಕ್ರದಲ್ಲಿ ಅಂತರ್ ದೃಷ್ಟಿಯನಿಟ್ಟು ಬಾಹ್ಯ ಪ್ರಪಂಚವನ್ನು ಅಳಿದು ದೇಹಭಾವವ ಬಿಟ್ಟು ಮನಸ್ಸು ಆ ಕಮಲದ ಮಧ್ಯದಲ್ಲಿ ಲಯವಾದರೆ ಅಲ್ಲಿ ನಾ-ನೀನೆಂಬುದು ಇಲ್ಲವಾಗಿ ಕೇವಲ ಶಾಂತಿ ಸಮಾಧಾನ ನೆಲೆಸಿದಲ್ಲಿ ನಿಜಮುಕ್ತಿಯಿದೆ ಎನ್ನುತ್ತಿದ್ದಾರೆ ಅಕ್ಕಮಹಾದೇವಿ.

(ಮುಂದುವರೆಯುವುದು...)

-: "ದೇವನೆಡೆಗೆ ನಮ್ಮ ನಡಿಗೆ" :-

-ಅಂತರ್‌ಜ್ಯೋತಿ..

ಮಾನವ ತನ್ನ ಪೂರ್ವಕರ್ಮದ ಅನುಸಾರವಾಗಿ ಹುಟ್ಟು-ಸಾವುಗಳನ್ನು ಜನ್ಮಜನ್ಮಾಂತರದ ವಾಹಿನಿಯಿಂದ ಪಡೆಯುತ್ತಿರುತ್ತಾನೆ. ಈ ಜನ್ಮ-ಜನ್ಮಾಂತರದ ಬಳುವಳಿಯಾಗಿ ಬಂದ ವಿಷಯವಾಸನೆಗಳೆಷ್ಟು? ಎಂಬುದು ಸಹ ಅವನ ವಿಚಾರ ಪರಿಧಿಯನ್ನು ಮೀರಿದೆ, ಬೀಜವು ಮಣ್ಣಿನ ಸಂಪರ್ಕವನ್ನು ಪಡೆದು ಮೊಳೆತು ಎಲೆ, ರೆಂಬೆ-ಕೊಂಬೆಗಳನ್ನು ಪಡೆದಂತೆ, ಆತ್ಮವು ಕಾಯವನ್ನು ಪಡೆದ ನಂತರ ಕಾಲವಾಹಿನಿಯಲ್ಲಿ ಪ್ರಾಕೃತಿಕ ಹಾಗು ಅಪ್ರಾಕೃತಿಕ ಅಂಶಗಳು ಆತನಲ್ಲಿ ಅಂಕುರಿಸಿ ಬೆಳೆಯತೊಡಗುತ್ತವೆ. ಒಂದು ಹೇಳಿಕೆಯ ಪ್ರಕಾರ ಆತ್ಮವು ಗರ್ಭವನ್ನು ಪ್ರವೇಶಿಸಿದಾಗ ಸುಪ್ತ ಪ್ರಜ್ಞಾವಸ್ಥೆಯಲ್ಲಿದ್ದು ಹಿಂದಿನ ಎಲ್ಲಾ ಜನ್ಮದ ಅರಿವನ್ನು ಹೊಂದಿರುವುದಲ್ಲದೆ ಆನಂದದಿಂದ ಇರುತ್ತದೆ. ಗರ್ಭದಿಂದ ಹೊರಬಂದಾಗ ಆ ಆನಂದದ ಅಭಾವ ದಿಂದಾಗಿ ಕಿರುಚಲು ಪ್ರಾರಂಭಿಸುತ್ತದೆ. ಹೀಗೆ ಹೊರಬಂದು ತೆಗೆದುಕೊಂಡ ಮೊದಲ ಉಸಿರೇ 'ಜನನ' ಎನಿಸಿಕೊಳ್ಳುತ್ತದೆ. ಆ ಮಗುವು ಬೆಳೆಯುತ್ತಾ ದಿನಗಳೆದಂತೆ ಶಾರೀರಿಕ, ಮಾನಸಿಕ ರಂಗಗಳಲ್ಲಿ ಹಲವು ಪರಿವರ್ತನೆಗಳನ್ನು ತಳೆದು ತನ್ನ ನೈಜತೆಯನ್ನು ಮರೆಯುತ್ತದೆ. ಆಗ ಸದ್ಗುರುವು ತನ್ನ ಕೃಪಾಕಟಾಕ್ಷದಿಂದ ಮಗುವಿಗೆ ತನ್ನ ನಿಜದರಿವನ್ನು ಪಡೆಯಲು ಇಷ್ಟಲಿಂಗ ದೀಕ್ಷಾ ಸಂಪನ್ನನಾಗಿ ಮಾಡಿ, ಲಿಂಗಾಂಗ ಯೋಗ ಮಾರ್ಗವನ್ನು ದಯಪಾಲಿಸುವನು. ಹೀಗೆ ಇಷ್ಟಲಿಂಗವನ್ನು ಪಡೆದ ಆತ್ಮವು ಗುರುಕೊಟ್ಟ ಯೋಗಮಾರ್ಗದ ಬೆಳಕಿನಲ್ಲಿ ತ್ರಿಗುಣಗಳನ್ನು, ತ್ರೈಮಲಗಳೆಂಬ ಜಾಡ್ಯಗಳನ್ನೆಲ್ಲಾ ಕಳೆದುಕೊಳ್ಳುತ್ತಾ ಸಾಗಿ ಕೊನೆಗೆ ಕಳೆದುಕೊಳ್ಳಲು ಏನೂ (ಅಂತರಂಗದ ಕಲ್ಮಶಗಳು) ಇಲ್ಲದ ಸ್ಥಿತಿಯನ್ನು ಪಡೆಯುತ್ತಾನೆ. ಹೀಗೆ ತ್ರಿಗುಣಗಳನ್ನು, ತ್ರೈಮಲಗಳನ್ನು ಕಳೆದು ಕೊಂಡಂತಹ ಸ್ಥಿತಿಯು ಸಾಧಕನಿಗೆ ಭಗವಂತನ ದೈವೀ ಅನುಗ್ರಹಕ್ಕೆ ಪಾತ್ರನಾಗುವಂತೆ ಮಾಡುತ್ತದೆ. ನದಿಯ ನೀರು ಸಾಗರವನ್ನು ಬೆರೆತಂತೆ, ಆತ್ಮ ಪರಮಾತ್ಮನಲ್ಲಿ ಐಕ್ಯತೆಯನ್ನು ಪಡೆಯುತ್ತದೆ. ಅದು ಆತ್ಮ-ಪರಮಾತ್ಮನೆಂಬ ಉಭಯ ಭೇದರಹಿತ 'ಶೂನ್ಯಸ್ಥಿತಿ', ಅದರ ಸಂಪಾದನೆಯೇ "ಶೂನ್ಯ ಸಂಪಾದನೆ".

ಎಲ್ಲ ಎಲ್ಲವನರಿದು ಫಲವೇನಯ್ಯ,
ತನ್ನ ತಾನರಿಯಬೇಕಲ್ಲದೆ? ತನ್ನಲ್ಲಿ ಅರಿವು ಸ್ವಯವಾಗಿರಲು,
ಅನ್ಯರ ಕೇಳಲುಂಟೆ? ಚೆನ್ನಮಲ್ಲಿಕಾರ್ಜುನಾ (ಲಿಂಗದೇವ)
ನೀವು ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದ ನಿಮ್ಮನರಿದೆ.

ಶೂನ್ಯಸ್ಥಿತಿಯ ಮೇಲುತ್ತುಂಗದ ಪ್ರಥಮ ಆರಂಭಿಕ ಮೆಟ್ಟಿಲು "ನಾನು ಯಾರು?" ಎಂಬ ಪ್ರಶ್ನೆಯೊಂದಿಗೆ ಆರಂಭವಾಗುತ್ತದೆ. ಈ ಪ್ರಶ್ನೆ ಮೂಡದ ತನಕ ಆಧ್ಯಾತ್ಮರಂಗದಲ್ಲಿ ಸಾಧನೆ ಸಾಧ್ಯವಾಗದು. ಪ್ರಾರಂಭ ಇಲ್ಲಿಂದಲೇ!. ಇದನ್ನೇ "ಪಿಂಡಜ್ಞಾನಸ್ಥಲ"ವೆಂದು ಶರಣರು ಕರೆದಿರುವುದು. ನಾವು ಯಾರೆಂದು ಇದುವರೆಗೂ ತಿಳಿದಿರುವೆವೋ, ಅದು ನಾವಲ್ಲ!. ಇದು ನನ್ನ ಕೈ, ನನ್ನ ಕಾಲು ಎಂಬ ಅರ್ಥದಲ್ಲಿಯೂ ಸಹ ಸೂಕ್ಷ್ಮ ಸ್ವರೂಪದಲ್ಲಿ ಅವಯವಗಳು ನನ್ನ ಬಿಟ್ಟು ಭಿನ್ನವಾದವು ಎಂಬುದು ಕಾಣಬರುತ್ತಿದೆ. ಅವಯವಗಳೇ ನಾವಾದರೆ ಮರಣ ಕಾಲದಲ್ಲಿ ಈ ದೇಹವನ್ನು ಹೆಸರಿಡಿದು ಕರೆಯದೆ 'ಶವ' ಎಂದು ಏಕೆ ಹೇಳುವರು? ಇದರ

ಬಗ್ಗೆ ಚಿಂತನೆ- ಮಂಥನ ನಡೆಯಬೇಕಲ್ಲವೇ? ಹಾಗಾದರೆ ನಾವು ಯಾರು? ಎಂಬ ಪ್ರಶ್ನೆಗೆ ಉತ್ತರವನ್ನು ನಾವು ಇಂದಿನಿಂದಲೇ ಕಂಡುಕೊಳ್ಳಲು ಪ್ರಯತ್ನಿಸೋಣ.

-:ಗುರು ಚರಣವ ನಂಬಿ:-

ಸದ್ಗುರುವೊಬ್ಬ ಸಿಕ್ಕಿ ಬಿಟ್ಟರೆ, ಸಕಲವೂ ಸಿದ್ದಿಸಿದಂತೆಯೇ:-

-ಸಂತ ಕಬೀರದಾಸರ ದೋಹೆ.

ತಾಯಿ-ತಂದೆ, ಪತಿ-ಪತ್ನಿ, ಮಗ-ಮಗಳು, ಆಪ್ತರು ಹಿತೈಷಿಗಳು, ಬಂಧು-ಬಾಂಧವರೆಲ್ಲಾ ಪ್ರತಿಮನೆಯಲ್ಲೂ ಇದ್ದೇ ಇರುತ್ತಾರೆ. ಪ್ರತಿಯೊಬ್ಬರಿಗೂ ಸಿಕ್ಕೇ ಸಿಗುತ್ತಾರೆ. ಆದರೆ ಸದ್ಗುರು ಮಾತ್ರ ಪ್ರತಿಯೊಬ್ಬರಿಗೂ ಸಿಗುವುದು ದುರ್ಲಭ. ಸದ್ಗುರುವಿನ ಕೃಪಾಶೀರ್ವಾದದ ಒಲುಮೆ, ಸಾನಿಧ್ಯ, ಮಾರ್ಗದರ್ಶನ ಪೂರ್ವಜನ್ಮದ ಪುಣ್ಯದ ಫಲದಿಂದ ಮಾತ್ರ ಸಾಧ್ಯ. ಜಗದಲ್ಲಿ ಯಾರು ಅಧಿಕರು ಎಂದು ಪಾರ್ವತಿದೇವಿ ಒಮ್ಮೆ ಯೋಗಿರಾಜ ಶಿವನನ್ನು ಕೇಳಿದಾಗ ಪರಮೇಶ್ವರನು "ನ ಗುರೋರಧಿಕಂ, ನ ಗುರೋರಧಿಕಂ" ಎಂದು ಗುರುವಿನ ಮಹತ್ವವನ್ನು ಆಗಮಗಳಲ್ಲಿ ಸಾರಿ ಹೇಳಿರುವುದು ಇದೇ ಮೌಲ್ಯವನ್ನು ಎತ್ತಿ ಹಿಡಿಯಲು.

ವೀರ ವೈರಾಗ್ಯ ನಿಧಿ ಅಕ್ಕಮಹಾದೇವಿಯವರು ಮಹಾಗುರು ಬಸವಣ್ಣನವರನ್ನು ಕಾಣಲು, ಅವರ ಶ್ರೀ ಚರಣದ ಆಶ್ರಯ ಪಡೆಯಬೇಕಾದರೆ ಪರಮಾತ್ಮ ಶ್ರೀ ಲಿಂಗದೇವನ ಒಲುಮೆಯ ಅನುಗ್ರಹವಿಲ್ಲದೆ ಸಾಧ್ಯವಾಗದು, ಭಗವಂತನ ಒಲುಮೆಯಿಂದ ಗುರುವರನ ಕಂಡೆಂದು ಈ ಕೆಳಗಿನ ವಚನದ ಮೂಲಕ ಸೂಚಿಸಿದ್ದಾರೆ.

ಅರಸಿ ತೊಳಲಿದರಿಲ್ಲ, ಬಯಸಿ ಹೊಕ್ಕರಿಲ್ಲ, ತಪಸ್ಸು ಮಾಡಿದರಿಲ್ಲ
ಅದು ತಾನು ಬಹಕಾಲಕ್ಕಲ್ಲದೆ ಸಾಧ್ಯವಾಗದು.
ಶಿವನೊಲಿದಲ್ಲದೆ ಕೈಗೂಡದು, ಚೆನ್ನಮಲ್ಲಿಕಾರ್ಜುನ(ಲಿಂಗದೇವ) ಎನಗೊಲಿದನಾಗಿ
ಆನು ಬಸವಣ್ಣನ ಶ್ರೀ ಪಾದವ ಕಂಡು ಬದುಕಿದೆನು.

ಹಾಗೆಯೆ, ಪರಮ ಪೂಜ್ಯರಾದ ಮಾತಾಜಿಯವರೊಡನಾಟದ ಸಂಪರ್ಕ, ಮಮತೆ ತುಂಬಿದ ಮಾತೃ ಕಡಲಿನ ಭಕ್ತಿಯ ಸಿಂಚನ, ಪವಿತ್ರ ದೀಕ್ಷಾ ಸಂಸ್ಕಾರ ಪಡೆಯಲು ನಾವುಗಳು ಪುಣ್ಯಮಾಡಿರುವೆವು. ಅವರ ಅನುಗ್ರಹವು ಪರಮಾತ್ಮನ ಅನುಗ್ರಹದ ಸಂಕೇತ ಹಾಗು ಅವರ ನುಡಿಗಳು ಬಸವಾದಿ ಶರಣರ ಒಲುಮೆಯ ಸಂದೇಶದ ಪವಿತ್ರ ಸ್ಪರ್ಶಗಳು.

ಮೂಢನಂಬಿಕೆಗಳ ಆಗರವಾಗಿದ್ದ ಮಾನವನ ಅಂಧಕಾರದ ಮನೋಭೂಮಿಕೆಯಲ್ಲಿ ಜ್ಞಾನದ ದೀವಿಗೆಯನ್ನು ಹಚ್ಚಿಟ್ಟ ಜ್ಞಾನದೇವತೆ, ಜ್ಞಾನಗುರುವಾಗಿದ್ದಾರೆ. ಏಕಗುರು ನಿಷ್ಠೆ, ಏಕಲಿಂಗ ನಿಷ್ಠೆಯೆಂಬ ಮಹಾಮಾರ್ಗದ ಇರುವಿಕೆಯ ಅರಿವನ್ನು ಬೋಧಿಸಿದ ಬೋಧಗುರು, ಧರ್ಮದ ಅರಿವಿರದೆ ಅಡ್ಡಲಾಗಿ ಹೋಗುತ್ತಿದ್ದ ಸಮಾಜವನ್ನು ನಮ್ಮದು 'ಬಸವಧರ್ಮ' ಎಂದು ಟೊಂಕ ಕಟ್ಟಿ ನಿಲ್ಲಿಸಿ, ನಿದ್ರೆಯಲ್ಲಿ ನಿರತವಾಗಿದ್ದ ಮಠಮಾನ್ಯ ಸಮಾಜವನ್ನು ಎಚ್ಚರಿಸಿ ನಮ್ಮ ಧರ್ಮಪಿತ 'ಬಸವಣ್ಣನವರು', ನಮ್ಮ ತಾಯಿ 'ವಚನಾಂಬಿಕೆ" ಎಂದು ಸಾರಿ ಧರ್ಮಪ್ರವರ್ತನೆ ಮಾಡಿದ ಧರ್ಮಶಾಸ್ತ್ರಜ್ಞೆ ಪರಮ ಪೂಜ್ಯ ಮಾತಾಜಿಯವರು.

ಧರ್ಮದ ಏಳ್ಗೆಗಾಗಿ ಶ್ರಮಿಸಿದ ನಮ್ಮ ತಾಯಿ ಇವರು. ಕ್ರಿಶ್ಚಿಯನ್ನರಿಗೆ ಗುರುವಾಗಿ ಏಸುಕ್ರಿಸ್ತ, ಮುಸ್ಲಿಂರಿಗೆ ಗುರುವಾಗಿ ಮಹಮದ್ ಪೈಗಂಬರ್, ಸಿಖ್‌ರಿಗೆ ಗುರುವಾಗಿ ಗುರುನಾನಕ್ ಇರುವಂತೆ ಲಿಂಗಾಯತ ಧರ್ಮದ ಆದಿ ಗುರು 'ಬಸವಣ್ಣನವರು' ಎಂದು ಸಾರಿ ಲಿಂಗಾಯತ ಧರ್ಮಕ್ಕೆ ಅಂಟಿದ್ದ ಶಾಪವನ್ನು ತೊಡೆದುಹಾಕಿದ ಮಹಾನ್ ಘನ ವಿದ್ವಾಂಸರು ಪೂಜ್ಯರು. ಅದಕ್ಕೆ ಸಾಕ್ಷಿ ಈ ಕೆಳಕಂಡ ಹಲವಾರು ವಚನಗಳು:-

ಆದಿ ಗುರು ಬಸವಣ್ಣ ಭೇದಿಸಿ ಲಿಂಗವ ಕೊಟ್ಟ
ಮೂದೇವರೊಡೆಯ ಮೂಜಗದ ಕರ್ತೃವೇ
ಆದಿಗುರು ಬಸವ ಸರ್ವಜ್ಞ.

ಸಂಗನ ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು
ಜಗವೆಲ್ಲಕೆಯೂ ಗುರು ಕಾಣಾ ಗುಹೇಶ್ವರ.

ಹೀಗೆ ವಚನಗಳಲ್ಲಿ ಬಿಂಬಿತವಾದ ಇತಿಹಾಸದ ಸತ್ಯಗಳನ್ನು ಹೆಕ್ಕಿ ತೆಗೆದು ವಚನದ ಘನಮೌಲ್ಯವನ್ನು, ಬಸವಣ್ಣನವರ ನಿಜ ಸಂದೇಶಗಳನ್ನು ಹಾಗು ಲಿಂಗಾಯತ ಧರ್ಮದ ಇತಿಹಾಸಕ್ಕೆ ಅಂಟಿದ್ದ ಅನೇಕ ಕಳಂಕಗಳನ್ನು ಪರಿಹರಿಸಿದ ಮಹಾ ಮೇಧಾವಿಗಳು ಪರಮ ಪೂಜ್ಯರಾಗಿದ್ದಾರೆ. ಪ್ರಾರಂಭದಲ್ಲಿ ಸಮಾಜವು ಈ ವಿಚಾರವನ್ನು ಅರಗಿಸಿಕೊಳ್ಳದೆ ಟೀಕೆಯನ್ನು ಮಾಡತೊಡಗಿತ್ತು, ಅದಕ್ಕೆ ಮಠಾಧೀಶರು ಹೊರತಾಗಿಲ್ಲ, ಅವರೂ ಟೀಕೆಯ ಸುರಿಮಳೆಯನ್ನೇ ಸುರಿಸಿದರು. ಒಬ್ಬ ವೀರ ಯೋಧ ಮಾತ್ರ ಎಂಥ ದೊಡ್ಡ ಕಾಳಗ ಏರ್ಪಟ್ಟರೂ ಹೋರಾಡ ಬಲ್ಲ. ಅದೇ ರೀತಿ ಪೂಜ್ಯರು ವಚನ ತತ್ವವೆಂಬ ಖಡ್ಗಹಿಡಿದು, ಗುರು ಬಸವ ತಂದೆಯ ಅನುಗ್ರಹದ ಬಲದಿಂದ ಹೆಜ್ಜೆ ಹೆಜ್ಜೆಗೂ ಇತಿಹಾಸವನ್ನು ಬರೆಯುತ್ತ, ಇತಿಹಾಸದ ಅಡಿಗಲ್ಲ ಮೇಲೆ ವಿರಾಜಮಾನರಾಗಿ ಶೋಭಿಸುತ್ತಿರುವ ಜಂಗಮ ಜ್ಯೋತಿ ಪರಮ ಪೂಜ್ಯ ಮಾತಾಜಿ.

ಬಸವಣ್ಣ ಎಂದರೆ ಎತ್ತು ಎಂದು ಭಾವಿಸಿದ್ದ ಸಮಾಜದ ಕುರುಡತ್ವವನ್ನು ಹೋಗಲಾಡಿಸಲು ಬಸವಣ್ಣನವರ ಭವ್ಯ ವ್ಯಕ್ತಿತ್ವ ತುಂಬಿರುವ ಭಾವಚಿತ್ರವನ್ನು ಬರೆಸಿ, ಇಂದು ಎಲ್ಲರ ಮನೆಯಲ್ಲೂ ಬಸವಣ್ಣನವರೆಂದರೆ ಎತ್ತಲ್ಲ, ಭವಪಾಶದಿಂದ ಎತ್ತಬಲ್ಲ ಮಹಾನ್‌ಶಕ್ತಿ ಎಂಬ ನಿಜಗುರುವಿನ ಅರುಹನ್ನು ತೋರಬಲ್ಲ ಚಿತ್ರಪಟಗಳು ರಾರಾಜಿಸುತ್ತಿರುವುದು ಶ್ರೀ ಮಾತೆಯ ಅನುಗ್ರಹದಿಂದ ಎಂಬುದನ್ನು ಮರೆಯುವಂತಿಲ್ಲ. ಈ ಮೂಲಕ ಸಮಾಜದ ಕುರುಡತ್ವವನ್ನು ಹೋಗಲಾಡಿಸಿದ ಜ್ಞಾನಾಂಬೆ ನಮ್ಮ ಮಾತಾಜಿ. ಬಸವಣ್ಣನವರ ಯೋಗಭೂಮಿಕೆ ತುಂಬಿರುವ ಚಿತ್ರಪಟಗಳನ್ನು ಬರೆಸಿ ಮಹಾಪುರುಷನ ಚರಿತ್ರೆಯಲ್ಲಿ ತುಂಬಿರುವ ಅನೇಕ ಲೋಪದೋಷಗಳನ್ನು ಸಾಕ್ಷಿಸಮೇತ ವಚನಗಳ ಆಧಾರದ ಮೇಲೆ ನಿವಾರಿಸಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಅದರ ಕೆಲವೊಂದು ಉದಾಹರಣೆಗಳು ಇಂತಿವೆ:

1. ಬಸವಣ್ಣನವರೇ ಧರ್ಮಗುರು*
2. ಬಸವಣ್ಣನವರ ಜನನ ಹಾಗು ಲಿಂಗೈಕ್ಯಕ್ಕೆ ಸಂಬಂಧಿಸಿದ ಉಪಯುಕ್ತ ಮಾಹಿತಿಗಳು*
3. ಬಸವಣ್ಣನವರಿಗೆ ಒಬ್ಬಳೇ ಹೆಂಡತಿ*

4. ಬಸವಣ್ಣನವರೆ ಇಷ್ಟಲಿಂಗದ ನಿರ್ಮಾಪಕರು*

5. ಬಸವಣ್ಣನವರೆ ಶೂನ್ಯಪೀಠ ಸಂಸ್ಥಾಪಕರು*

ಹೀಗೆ ಅನೇಕ ವಿಚಾರಗಳನ್ನು ಒಳಗೊಂಡ ಅನೇಕ ಮಾಹಿತಿಯನ್ನು ತಮ್ಮ ಪ್ರವಚನಗಳಲ್ಲಿ ತಿಳಿಸಿರುವರಲ್ಲದೆ, ಅವುಗಳನ್ನು ಕೃತಿಗಿಳಿಸಿ ಸಮಾಜದ ಮೂಲೆ ಮೂಲೆಗೂ ತಲುಪಿಸಿದ ಶ್ರೇಯೋತ್ತಮ ಕಾರ್ಯ ಇವರಿಂದಲೇ ನಡೆದಿರುವುದು ನಿರ್ವಿವಾದ. ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿಯೂ "ರಾಷ್ಟ್ರೀಯ ಬಸವ ದಳ" ಎಂಬ ಕೇಂದ್ರಗಳನ್ನ ತೆರೆದು, ಶರಣತತ್ವಗಳನ್ನು ಸಮಾಜಕ್ಕೆ ಬಿತ್ತರಿಸುವ ಜ್ಞಾನನಾಡಿ ಕೇಂದ್ರಗಳನ್ನಾಗಿ ಮಾಡಿದ್ದು, ಇಂದು ಸಾವಿರಾರು ಶರಣ ಬಂಧುಗಳು ಈ ಕೇಂದ್ರಗಳಿಂದ ಯೋಗಮಾರ್ಗದಲ್ಲಿ ಹಾಗು ಸಾಮಾಜಿಕ ಸುಧಾರಣೆಗಳಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡು ನಡೆಯುತ್ತಿದ್ದಾರೆ. ಇಂದು ವಚನಗಳ ಸರ್ವ ವ್ಯಾಪಕತ್ವದ ಕೀರ್ತಿಗೆ ಪರಮ ಪೂಜ್ಯರ ಹಾಗು ಲಿಂ.ಲಿಂಗಾನಂದ ಸ್ವಾಮೀಜಿಯವರ ಕೊಡುಗೆ ಅಮೂಲ್ಯವಾದುದ್ದಾಗಿದೆ. ಇವರು ಬಸವಣ್ಣನವರಿಂದ ಜನಮನದ ಉದ್ಧಾರಕ್ಕೆ ಕಳಿಸಲ್ಪಟ್ಟ ಕಾರಣಿಕ ಚೇತನ. ಅಂತಹ ಮಾತೆಗೆ ಇದೋ ನನ್ನ ಅನಂತ ಶರಣು-ಶರಣಾರ್ಥಿಗಳು.

ಶಾರದ ಬಸವರಾಜ್
ರಾ.ಬ.ದಳ, ಭದ್ರಾವತಿ

ಹೆಣ್ಣು ಅಬಲೆಯಲ್ಲ ಸಬಲೆ

– ವಿನೋದಮ್ಮ ಕೃಷ್ಣಮೂರ್ತಿ

ಹೆಣ್ಣು ಹೆಣ್ಣು ಎಂದು ಏಕೆ ಜರಿಯುವಿರಿ. ಹೆಣ್ಣು ಅಲ್ಲವೇ ಜನ್ಮ ಕೊಟ್ಟ ತಾಯಿ. ಬಯಲು ಸೀಮೆಯ ಬಯಲು ದಾರಿಯಲಿ ಮುಳ್ಳುಗಳಲಿ, ಕಲ್ಲು ಹೊಲಗಳಲಿ ಕಾಯಕ ಮಾಡುವ ರೈತ ಹೆಣ್ಣು ಮಕ್ಕಳು ನಾವು. ಕನ್ನಡಮ್ಮನ ಕನ್ನಡ ನೆಲದ ಮಣ್ಣಿನ ಕಣಗಳನ್ನು ಕಣ್ಣಲ್ಲಿ ತುಂಬಿಕೊಂಡು, ಮಣ್ಣಿನ ವಾಸನೆ ಉಂಬುವ ಕನ್ನಡಮ್ಮನ ಮಣ್ಣಿನ ಮಾಣಿಕ್ಯದ ಮಹಿಳೆಯರು ನಾವು. ಕಿತ್ತೂರು ರಾಣಿ ಚೆನ್ನಮ್ಮನಂತಹ ಕೆಚ್ಚನ್ನು ಹೊಂದಿರುವ ಸ್ತ್ರೀಶಕ್ತಿ ಸ್ತ್ರೀಯರು ನಾವು. ವೀರ ಒನಕೆ ಓಬ್ಬವ್ವನ ವೀರತ್ವ ಹೊಂದಿರುವ ವೀರ ವನಿತೆಯರು ನಾವು. ಭಾರತ ಮಾತೆಯ, ಕನ್ನಡಾಂಬೆಯ, ಕಾವೇರಿಯ ಕುವರಿಯರು ನಾವು. ರೋಗಿಗಳಿಗೆ ನೊಂದು ಬೆಂದವರಿಗೆ ಸಾಂತ್ವನ ಹೇಳಿ ಶಾಂತಿ ಸಂತೋಷ ತುಂಬುವ ಸಹೋದರಿಯರು ನಾವು. ಅಡಿಯಿಂದ ಮುಡಿಯವರೆಗೆ ಸೀರೆಯನ್ನು ಉಡುವ ಭಾರತದ ನಾರಿಯರು ನಾವು. ಜಾತಿ ಭೇದ, ವರ್ಗ ಭೇದ ಎನ್ನದೆ ಸನ್ಮಂಗಳ ಉಂಟುಮಾಡುವ ಮಂಗಳೆಯರು ನಾವು. ಸತಿಸಾವಿತ್ರಿ, ಮಹಾಸತಿ ಅನುಸೂಯೆ, ಹೇಮರೆಡ್ಡಿ ಮಲ್ಲಮ್ಮನಂತಹ ಮಹಾಸತಿಯರು ನಾವು. ಸತ್ಯಕ್ಕ, ಲಕ್ಕಮ್ಮ, ನೀಲಮ್ಮ ಅಕ್ಕನಾಗಮ್ಮನಂತಹ ಶರಣೆಯರು ನಾವು. ಬುದ್ಧ, ಬಸವಣ್ಣ, ವಿವೇಕಾನಂದರಿಗೆ ಜನ್ಮವಿತ್ತ ಜನನಿಯರು ನಾವು. ಜಗನ್ಮಾತಾ ಅಕ್ಕಮಹಾದೇವಿಯಂತಹ ಮಹಾದೇವಿಯರು ನಾವು. ವೀರ ವಿರಾಗಿಣಿ, ವೀರಕೇಸರಿ, ಕ್ರಾಂತಿಯೋಗಿಣಿ, ಕಾವಿಧಾರಿಣಿ, ಓಂಕಾರ ಸ್ವರೂಪಿಣಿ, ಪ್ರಪಂಚದ ಪ್ರಪ್ರಥಮ ಮಹಿಳಾ ಮಹಾಜಗದ್ಗುರು ಮಾತೆ ಮಹಾದೇವಿ, ಬಸವಾತ್ಮಜೆ, ಘನಗುರು ಮಾತೆಯ ಕುಡಿಗಳು ನಾವು. ಅಬಲೆಯರಲ್ಲ ನಾವು ಸಬಲೆಯರು.

ಲಿಂಗದೇವನ ಶರಣರ ಅನುಭಾವದಿಂದ

ಭವದ ಕೇಡು ನೋಡಿರಯ್ಯಾ!

– ಶರಣ.ಸಚ್ಚಿದಾನಂದ ಚಟ್ನಳ್ಳಿ

ಕೆಚ್ಚಿಲ್ಲದ ಮರನ ಕ್ರಿಮಿ ಇಂಬುಗೊಂಬಂತೆ
ಒಡೆಯನಿಲ್ಲದ ಮನೆಯ ಶುನಕ ಸಂಚುಗೊಂಬಂತೆ
ನೃಪತಿಯಿಲ್ಲದ ದೇಶವ ಮನ್ನೆಯರಿಂಬುಗೊಂಬಂತೆ
ನಿಮ್ಮ ನೆನಹಿಲ್ಲದ ಶರೀರವ
ಭೂತಪ್ರೇತ ಪಿಶಾಚಿಗಳಿಂಬುಗೊಂಬಂತೆ
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಮರ ಅಥವಾ ಕಟ್ಟಿಗೆಯಲ್ಲಿ ಬೆಂಕಿ ಇರುತ್ತದೆ. ಒಂದು ವಚನಲ್ಲಿ ಜೇಡರ ದಾಸಯ್ಯನವರು "ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ" ಎನ್ನುವ ಹಾಗೆ, ಮರದಲ್ಲಿ ಅಗ್ನಿಯಿದ್ದರೂ ಅದು ಮರವನ್ನು ಸುಡುವುದಿಲ್ಲ ಬದಲಿಗೆ ಮರವನ್ನು ರಕ್ಷಣೆ ಮಾಡುತ್ತದೆ. ಯಾವಾಗ ಮರದಲ್ಲಿರುವ ಕೆಚ್ಚು (ಮರದ ಗಟ್ಟಿಯಾದ ಭಾಗ/ ಅಂತಃಸತ್ವ/ ಅಗ್ನಿ) ನಾಶವಾಗುತ್ತದೆಯೋ ಅಂಥ ಮರವನ್ನು ಕ್ರಿಮಿಗಳು(ಗೆದ್ದಲು ಹುಳುಗಳು) ತಿನ್ನುತ್ತವೆ.

ನೃಪತಿಯಿಲ್ಲದ ದೇಶ ಎಂದರೆ ಅರಸನಿಲ್ಲದ ರಾಜ್ಯ. ಸಬಲನಾದ ರಾಜನಿಲ್ಲದ ದೇಶದ ಮೇಲೆ ಶತ್ರುಗಳು ಆಕ್ರಮಣ ಮಾಡುತ್ತಾರೆ. ಒಡೆಯನಿಲ್ಲದ ಮನೆಯಲ್ಲಿ ಸಹಜವಾಗಿಯೇ ನಾಯಿಗಳು ಹೋಗಲಿಕ್ಕೆ ಹೊಂಚು ಹಾಕುತ್ತಿರುತ್ತವೆ. ಅದೇ ರೀತಿ ಚೆನ್ನಮಲ್ಲಿಕಾರ್ಜುನದೇವರ ದೇವನ ನೆನಹಿಲ್ಲದ ಮನದಲ್ಲಿ ಭೂತ, ಪ್ರೇತ ಪಿಶಾಚಿಗಳು ತುಂಬಿಕೊಳ್ಳುತ್ತವೆ ಎಂದು ಅಕ್ಕ ಹೇಳುತ್ತಾರೆ.

ಕಾಮ ಕ್ರೋಧಾದಿಗಳು, ಅಷ್ಟಮದಗಳು, ಅಶಾಂತಿ, ಭ್ರಾಂತಿ ಮತ್ತು ದುಗುಡ ದುಮ್ಮಾನಗಳೇ ಆ ಭೂತ, ಪ್ರೇತ ಪಿಶಾಚಿಗಳು. ಅದಕ್ಕಾಗಿ ನಾನು ನಮ್ಮ ಮನಸ್ಸನ್ನು ಸದಾಕಾಲ ದೇವರ ನೆನಹಿನಂದ ತುಂಬಿಕೊಂಡಿರಬೇಕು.

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳುದೊಂದು ಮನ
ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನದೇವರ ದೇವಾ.

ಈ ಜಗತ್ತಿನ ಕಾರ್ಯ ಕಲಾಪಗಳು, ಚಟುವಟಿಕೆಗಳು ದಿನ ನಿತ್ಯವೂ ರವಿಯ ಉದಯದೊಂದಿಗೆ ಆರಂಭವಾಗುತ್ತವೆ. ಲೋಕದ ಎಲ್ಲಾ ಚೇಷ್ಟೆ(ಚಟುವಟಿಕೆ)ಗಳಿಗೆ ರವಿ ಹೇಗೆ ಕಾರಣನೋ ಹಾಗೆ ನಮ್ಮ ಎಲ್ಲಾ ಕರಣೇಂದ್ರಿಯಗಳ ಚಟುವಟಿಕೆಗಳಿಗೆ ನಮ್ಮ ಮನಸ್ಸೇ ಕಾರಣ. ಇಂಥ ಮನಸ್ಸನ್ನು ದೇವರ ಪ್ರಾರ್ಥನೆ ಮತ್ತು ಧ್ಯಾನದಲ್ಲಿ ತೊಡಗಿಸಿದಾಗ ಮನಸ್ಸು ಘನಮನಸ್ಸಾಗುತ್ತದೆ. ದೇವ ಕಾರುಣ್ಯ ನಮ್ಮ ಮನಸ್ಸಿನಲ್ಲಿ ಅವತೀರ್ಣವಾಗಿ ಮನಸ್ಸೆಲ್ಲಾ ದೈವೀಮಯವಾಗುತ್ತದೆ. ಆಗ ಇಂಥ ಮನಸ್ಸಿನಿಂದ ದುರ್ವಿಚಾರಗಳೆಂಬ ಭೂತ ಪ್ರೇತ ಪಿಶಾಚಿಗಳು ಹೊರಟುಹೋಗಿ ಸದ್ವಿಚಾರಗಳು ತುಂಬಿಕೊಳ್ಳುತ್ತವೆ.

ಈ ಮನಸ್ಸು ದೈವೀಮಯಗೊಳ್ಳುವಂತೆ ಮತ್ತು ಅದನ್ನು ಪರಮಾತ್ಮನಲ್ಲಿ ನಿಲ್ಲಿಸಲು ಏಕಾಂತದ ಪೂಜೆ ಧ್ಯಾನಗಳಿಗಿಂತ ಪ್ರಬಲವಾಗಿರುವ ಅಸ್ತ್ರವೆಂದರೆ ಶರಣರೊಡಗೂಡಿ ಮಾಡುವ ಸಾಮೂಹಿಕ ಪ್ರಾರ್ಥನೆ.

ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ.
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ.
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ.
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯಾ.
ಎಲೆ ಪರಶಿವಮೂರ್ತಿ ಹರನೆ ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿಭವಂಗಳು ಕೆಟ್ಟ ಕೇಡ ನೋಡಾ, ಚೆನ್ನಮಲ್ಲಿಕಾರ್ಜುನದೇವರ ದೇವಾ.

ನೀರು ಜೋರಾಗಿ ಹರಿಯುತ್ತಿರುವಾಗ ಅದಕ್ಕೆ ಏನೇ ಅಡ್ಡ ಬಂದರೂ ಅದು ತಡೆಯುವುದಿಲ್ಲ. ಘಟ್ಟಬೆಟ್ಟಗಳನ್ನೂ ಭೇದಿಸಿಕೊಂಡು ಸಾಗುವ ಶಕ್ತಿ ಗಂಗೆಗಿದೆ. ಜ್ಯೋತಿ ಹಚ್ಚಿದಾಗ ಕತ್ತಲೆ ಓಡಿಹೋಗುತ್ತದೆ. ಜ್ಞಾನಿಯೊಡನಾಡುವ ಅಜ್ಞಾನಿಯು ಸುಜ್ಞಾನಿಯಾಗುತ್ತಾನೆ. ಅದೇ ರೀತಿ ಚೆನ್ನಮಲ್ಲಿಕಾರ್ಜುನದೇವರ ದೇವನ ಶರಣರನೊಡನಾಡುವ ವ್ಯಕ್ತಿಯ ಭವಿತನ ಹೋಗಿ ಭಕ್ತತ್ವ ಅಳವಟ್ಟು ಮುಕ್ತಿಪದ ದೊರಕುತ್ತದೆ. ಅದಕ್ಕಾಗಿಯೇ ನಮ್ಮ ಎಲ್ಲಾ ಆದಿ ಶರಣರು ತಮ್ಮ ವಚನಗಳಲ್ಲಿ ಶರಣರ ಸಂಗದ ಮಹತ್ವವನ್ನು ಸಾರಿ ಸಾರಿ ಹೇಳುತ್ತಾರೆ. ಆದ್ದರಿಂದ ನಾವು ಪ್ರತಿಯೊಬ್ಬರೂ ವಾರಕ್ಕೊಮ್ಮೆ ನಡೆಯುವ ಶರಣ ಸಂಗಮ – ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಲೇಬೇಕು.

ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಿರಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಿರಯ್ಯಾ
ಪರುಷದ ಬಲದಿಂದ ಅವಲೋಹದ ಕೇಡು ನೋಡಿರಯ್ಯಾ
ಲಿಂಗದೇವನ ಶರಣರ ಅನುಭಾವದಿಂದ
ಎನ್ನ ಭವದ ಕೇಡು ನೋಡಿರಯ್ಯಾ

ಎಂದು ಮಹಾಗುರು ಬಸವಣ್ಣನವರು, ಎಲ್ಲರಿಗೂ ಗುರುವಾದರೂ ಎಲ್ಲರ ಭವರೋಗ ಕಳೆಯುವ ಮಹಾಮಹಿಮರಾದರೂ, ಶರಣರ ಅನುಭಾವದಿಂದ ತಮ್ಮ ಭವದ ಕೇಡು ಎಂದು ಹೇಳುವುದು ಶರಣರ ಸಂಗದ ಮಹತ್ವ ಸಾರಿ ಹೇಳುತ್ತದೆ.

ದಿನಾಲೂ ಧರಿಸುವ ಬಟ್ಟೆಗಳು ಕೊಳೆಯಾಗುತ್ತವೆ. ಅವುಗಳನ್ನು ಮೇಲಿಂದ ಮೇಲೆ ಒಗೆದು ಶುಚಿ ಮಾಡಬೇಕಾಗುತ್ತದೆ. ಅದೇ ರೀತಿ ದಿನ ನಿತ್ಯದ ಲೌಕಿಕ ವ್ಯವಹಾರಗಳಲ್ಲಿ ತೊಡಗುವ ಮನಸ್ಸೂ ಮಲಿನಗೊಳ್ಳುತ್ತದೆ. ಅದನ್ನೂ ಕೂಡ ಶುಚಿಗೊಳಿಸಬೇಕು.

ಮಂಡೆ ಮಾಸಿದಡೆ ಮಹಾ ಮಜ್ಜನವ ಮಾಡುವುದು;
ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು;
ಮನದ ಮೈಲಿಗೆಯ ತೊಳೆಯಬೇಕಾದಡೆ
ಕೂಡಲ ಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು.

ಶರಣರೊಡನೆ ಮಾತನಾಡಿದಾಗ ಅವರ ಜ್ಞಾನದ ಮಾತುಗಳನ್ನು ಕೇಳಿಸಿಕೊಂಡಾಗ, ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಅನೇಕ ಸಲ ನಮ್ಮೆಲ್ಲರ ಮನಸ್ಸು ದುಗುಡಗೊಳ್ಳುತ್ತದೆ, ಚಂಚಲಗೊಳ್ಳುತ್ತದೆ ಕಷ್ಟಗಳು ಬಂದಾಗ ತತ್ತರಿಸಿ ಹೋಗುತ್ತದೆ. ಇದಕ್ಕೆಲ್ಲ ಏಕೈಕ ಪರಿಹಾರ

ಗುರು-ಲಿಂಗ-ಜಂಗಮರನ್ನು ನಿತ್ಯನೆನೆಯುವ ಶರಣರ ಸಂಗ. ಶರಣರ ಸಂಗದಲ್ಲಿ ಎಲ್ಲಾ ಕಷ್ಟಗಳಿಂದಲೂ ಬಿಡುಗಡೆದೊರೆತು ಮಾನಸಿಕವಾದ ಸುಖ ಸಿಗುತ್ತದೆ.

ಸುಖ ಯಾವುದು? ಸುಖಿ ಯಾರು?
ಸುಖದ ಅನುಭಾವ ಯಾವುದು?
ಸುಖ ಲಿಂಗ ಸುಖಿ ಶರಣ
ಸುಖದ ಅನುಭಾವ ಸುಸಂಗ
ಕೂಡಲಚೆನ್ನಸಂಗಮದೇವ ಪರವಿಲ್ಲವಾಗಿ.

ಪರಮಾತ್ಮನನ್ನು ಸತ್-ಚಿತ್-ಆನಂದ, ನಿತ್ಯ ಪರಿಪೂರ್ಣ ಎಂದು ಕರೆಯುತ್ತಾರೆ ಅವನು ನಿತ್ಯ ಸುಖಿ ಅದಕ್ಕಾಗಿಯೇ ಇಲ್ಲಿ ಚೆನ್ನಬಸವಣ್ಣನವರು "ಸುಖ ಯಾವುದು?" 'ಸುಖ ಲಿಂಗ' ಎಂದು ಹೇಳುತ್ತಿದ್ದಾರೆ. ಸುಖಿ ಯಾರು ಎಂದರೆ, ನಿತ್ಯ ತೃಪ್ತ ಆನಂದಮಯನಾಗಿರುವ ಲಿಂಗದೇವನನ್ನು ಉರದಲ್ಲಿ ಧರಿಸಿ ಕರದಲ್ಲಿ ಅರ್ಚಿಸುವ ಶರಣನೇ ಸುಖಿ. ನಾನು ಸುಖಿಯಾಗಿದ್ದೇನೆ ಎನ್ನುವ ಅನುಭವ ಶರಣರ ಸಂಗದಲ್ಲಿ ಬೆರೆತಾಗ ಮಾತ್ರ ನಮ್ಮ ಅರಿವಿಗೆ ಬರುತ್ತದೆ.

ಶರಣರ ಸಂಗದಲ್ಲಿ ಬೆರೆಯದವರಿಗೆ, ಶರಣರೊಡನೆ ಸುಖ ಸಂಭಾಷಣೆ ಮಾಡದವರಿಗೆ ಬಹುದೊಡ್ಡ ರೋಗ ಬರುತ್ತದೆ ಅದುವೇ ಭವರೋಗ. ಈ ಭವರೋಗಕ್ಕೆ ಲಿಂಗದೇವನ ಭಕ್ತಿಯೇ ದಿವ್ಯ ಔಷಧಿ.

ಭವರೋಗವೈದ್ಯನೆಂದು ನಾ ನಿಮ್ಮ ಮೊರೆಹೊಕ್ಕೆ
ಮುಕ್ತಿದಾಯಕ ನೀ ಕರುಣಿಸು ಲಿಂಗತಂದೆ
ಜಯ ಜಯ ಶ್ರೀ ಮಹಾದೇವ ಹರಹರ ಶ್ರೀ ಮಹಾದೇವ
ಎನ್ನುತ್ತಿದ್ದಿತೆನ್ನ ಮನವು ಲಿಂಗದೇವಂಗೆ ಶರಣೆನ್ನುತ್ತಿದ್ದಿತ್ತೆನ್ನ ಮನವು.

ಸದ್ಗುರುವು ವೈದ್ಯನಾಗಿ ಭವರೋಗವನ್ನು ಕಳೆಯುವ ಇಷ್ಟಲಿಂಗ ದೀಕ್ಷೆಯನ್ನು ಕರುಣಿಸುತ್ತಾನೆ. ಇಷ್ಟಲಿಂಗವನ್ನು ಧರಿಸಿದ ಭಕ್ತನು, ಭಕ್ತಿಯನ್ನು ಮಾಡಿ ಭವರೋಗವನ್ನು ಕಳೆದುಕೊಳ್ಳಬೇಕು.

ಭಕ್ತಿಯಿಂದಲೇ ಶಕ್ತಿ। ಭಕ್ತಿಯಿಂದಲೇ ಮುಕ್ತಿ
ಭಕ್ತಿ ವಿರಕ್ತಿಯಳಿದರೀ। ಜಗದಲ್ಲಿ
ಮುಕ್ತಿಯಿಲ್ಲೆಂದ ಸರ್ವಜ್ಞ॥

ಭಕ್ತಿಯನ್ನು ಮಾಡುವ ಶರಣನು ಇತರ ಭಕ್ತರೊಂದಿಗೆ ಒಡನಾಡಿದಾಗ ಮಾತ್ರ ಆ ಭಕ್ತಿಯು ಅಳವಡುತ್ತದೆ.

ಭಕ್ತರೊಡನಾಡುವುದು । ಭಕ್ತರೊಡಗೂಡುವುದು।
ಭಕ್ತರೊಳು ಭಕ್ತಿ ಬೆರೆಸಿಪ್ಪ । ಭಕ್ತನೆ
ಮುಕ್ತನಾಗುವನು ಸರ್ವಜ್ಞ॥

ನೋಟ ಲಿಂಗದಲ್ಲಿ । ಕೂಟ ಜಂಗಮದಲ್ಲಿ
ನಾಟಿದ ಮನವು । ಗುರುವಿನಲ್ಲಿ
ಶರಣರ ಮಾಟವನು ನೋಡಾ ಸರ್ವಜ್ಞ॥

ಲಿಂಗದ ಗುಡಿ ಲೇಸು । ಗಂಗೆಯ ತಡಿ ಲೇಸು
ಲಿಂಗ ಸಂಗಿಗಳ ನುಡಿ ಲೇಸು । ಶರಣರ
ಸಂಗವೇ ಲೇಸು ಸರ್ವಜ್ಞ॥

ಭವರೋಗವು ತೊಲಗಬೇಕಾದರೆ ನಮ್ಮ ಕಣ್ಣು, ಕಿವಿ, ಮನ, ಭಾವಗಳಲೆಲ್ಲಾ ದಿವ್ಯತ್ವ ತುಂಬಿಕೊಳ್ಳಬೇಕು. ವಚನದಲ್ಲಿ ಲಿಂಗದೇವನ ಹಾಗು ಗುರುಬಸವಣ್ಣನವರ ನಾಮಾಮೃತ, ನಯನದಲ್ಲಿ ಅವರ ಮೂರುತಿ, ಕಿವಿಯಲ್ಲಿ ಅವರ ಕೀರುತಿ ಮತ್ತು ಮನದಲ್ಲಿ ಅವರ ನೆನಹು ತುಂಬಿಕೊಂಡಾಗ ಮಾತ್ರ ಲಿಂಗದೇವನು ತನ್ನ ಚರಣಕಮಲದೊಳಗೆ ನಮ್ಮನ್ನು ಇಂಬಿಟ್ಟುಕೊಳ್ಳುತ್ತಾನೆ. ಇದೆಲ್ಲವೂ ಶರಣರ ಸಂಗದಲ್ಲಿ ಸುಲಭ ಸಾಧ್ಯವಾಗುತ್ತದೆ.

ಅಂದು ಅಕ್ಕ ಮಹಾದೇವಿಯವರು ಅನುಭಾವ ಮಂಟಪಕ್ಕೆ ಬಂದಾಗ, " ಇತ್ತಲೇಕೆ ಬಂದೆಯವ್ವಾ?" ಎನ್ನುವುದು ಅಲ್ಲಮ ಪ್ರಭುದೇವರ ಮೊದಲ ಪ್ರಶ್ನೆಯಾಗಿತ್ತು.

ಆಡುವುದು ಹಾಡುವುದು ಹೇಳುವುದು ಕೇಳುವುದು
ನಡೆವುದು ನುಡಿವುದು ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ
ಚೆನ್ನಮಲ್ಲಿಕಾರ್ಜುನ ದೇವರ ದೇವಾ, ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಂಗಳಕಳೆವೆನು.


ಎಂದು ಉತ್ತರ ಕೊಟ್ಟರು. ಶರಣರ ಸಂಗದಲ್ಲಿರುವುದು ಅವರ ಜೊತೆ ಮಾತನಾಡುವುದೇ ಒಂದು ರೀತಿಯ ಆನಂದ.


ಅಕ್ಕ ದೇವ ವಿರಹಿಯಾಗಿ ಅನುಭಾವ ಮಂಟಪಕ್ಕೆ ಬಂದರು. ಅಲ್ಲಿ ಅವರು ಕೋಟಿ ರವಿ ಶಶಿಗಳಿಗೆ ಮೀಂಟದ ಪ್ರಭೆಯನ್ನು ತಮ್ಮ ಕರಸ್ಥಲದಲ್ಲಿ ಕಂಡುಕೊಂಡರು. ತಮ್ಮ ಒಳಹೊರಗೂ ಲಿಂಗದೇವನ್ನು ಕಂಡುಕೊಂಡು ಇಚ್ಛಾಮರಣೆಯಾಗಿ ದೇಹ ಬಿಡಲು ಕದಳಿಗೆ ಹೊರಟರು. ಹಾಗೆ ಹೊರಡುವಾಗ ಗುರು ಬಸವಣ್ಣನವರು ಹಾಗು ಇತರ ಶರಣರು, ಈಗಲೇ ಹೋಗುವುದು ಬೇಡ, ಇನ್ನೂ ಸ್ವಲ್ಪ ದಿನಗಳ ಕಾಲ ನಮ್ಮೆಲ್ಲರ ಜೊತೆ ಇರಿ ಎಂದು ಕೇಳಿಕೊಂಡರು. ಆದರೆ ಅಕ್ಕನ ಮನಸ್ಸು ಲಿಂಗದೇವನ ಹೃದಯ ಕಮಲದಲ್ಲಿ ಬೆರೆಯಲು ಕಾತುರವಾಗಿದ್ದಿತು. ಕದಳಿಗೆ ಹೋಗುವ ಮಾರ್ಗ ಮಧ್ಯದಲ್ಲಿ "ಲಿಂಗ ಜಂಗಮವೇ ಗತಿಯೆಂದು ನಂಬಿದ ಸಂಗನ ಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ" ಎಂದು ಶರಣರ ಸಂಗವನ್ನು ನೆನೆಯುತ್ತಾರೆ. ಇದರಿಂದ ಶರಣರ ಸಂಗದಲ್ಲಿ ಸಿಗುವ ಆನಂದ ಏಕಾಂತದ ಪೂಜೆ ಧ್ಯಾನಗಳಿಗಿಂತ ಹಿರಿದು ಎಂದೆನಿಸುತ್ತದೆ. ಅದಕ್ಕಾಗಿ ಪ್ರತಿಯೊಬ್ಬರೂ ತಮ್ಮ ಜೀವನದ ಕೊನೆಯವರೆಗೆ ಶರಣರ ಸಂಗದಲ್ಲಿಯೇ ಕಾಲ ಕಳೆಯಬೇಕು.

ತೊಟ್ಟುಬಿಡುವನ್ನಕ್ಕ ಮತ್ತಾ ಬುಡದಾಸೆ ಬೇಕು,
ಮರ್ತ್ಯದ ಹಂಗುಳ್ಳನ್ನಕ್ಕ, ಸತ್ಯ ಶರಣರ ಸಂಗ
ನಿತ್ಯ ಜಂಗಮ ಸೇವೆ, ಕೃತ್ಯವಿರಬೇಕು.
ಅಮರೇಶ್ವರ ಲಿಂಗವನರಿವುದಕ್ಕೆ.

ಯಾವ ರೀತಿ ಒಂದು ಹಣ್ಣು ತೊಟ್ಟಿನಿಂದ ಕಳಚಿಬೀಳುವವರೆಗೆ ಮರಕ್ಕೆ ಅಂಟಿಕೊಂಡಿರುತ್ತದೆಯೋ ಅದೇ ರೀತಿ ಶರಣರು ಮರ್ತ್ಯಲೋಕದಲ್ಲಿ ಜೀವಿಸಿರುವವರೆಗೆ ಶರಣರ ಸಂಗದಲ್ಲಿಯೇ ದಿನ ಕಳೆಯಬೇಕು. ಆದ್ದರಿಂದ ನಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ದೇವವಾರದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುತ್ತ ಸಹಸಾಧಕರಾಗಿ ದೇವನೆಡೆಗೆ ಸಾಗೋಣ ಎಂದು ನನ್ನ ಕಳಕಳಿಯ ಪ್ರಾರ್ಥನೆ.

ಶರಣು ಶರಣಾರ್ಥಿಗಳೊಂದಿಗೆ





ಜಗನ್ಮಾತಾ ಅಕ್ಕಮಹಾದೇವಿ

ಶರಣೋತ್ಸವ ಕಾರ್ಯಕ್ರಮ

ಧಾರವಾಡದ ಉಳವಿ ರಸ್ತೆಯ ರೈಲ್ವೆಗೇಟ್ ಬಳಿ ಇರುವ

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ

Registerd NO/KA/BGW/50/2012-2014, RNI 19980/70, POSTED AT MBC BANGALORE GPO
ON 3rd,10th,20th, OF EVERY MONTH. LICENCED TO POST WITHOUT PRE PAYMENT
WPP-17, PAGES 32+4 (COVER PAGES)